# ದಿ : 15-03-2012 ರಂದು ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಅಧ್ಯಕ್ಷತೆಯಲ್ಲಿ ಕೋಲಾರದಲ್ಲಿ ನಡೆದ ಬೆಂಗಳೂರು ಮತ್ತು ಮೈಸೂರು ವಿಭಾಗಗಳ ಜಿಲ್ಲಾ ಉಪನಿರ್ದೇಶಕರ ಪ್ರಗತಿ ಪರಿಶೀಲನಾ ಸಭೆಯ ನಡಾವಳಿಗಳು.

ದಿ: **15-03-2012** ರಂದು ಶ್ರೀ ತುಷಾರ್ ಗಿರಿನಾಥ್, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಅಧ್ಯಕ್ಷತೆಯಲ್ಲಿ ಮೈಸೂರು ಮತ್ತು ಬೆಂಗಳೂರು ವಿಭಾಗದ ಜಿಲ್ಲಾ ಮಟ್ಟದ ಅಧಿಕಾರಿಗಳ ಸಭೆಯನ್ನು ಕೋಲಾರ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಸಲಾಯಿತು.

***ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು :***

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಅಪರ ಆಯುಕ್ತರು(ಆಡಳಿತ), ಆಯುಕ್ತರ ಕಛೇರಿ, ಸಾ.ಶಿ.ಇ., ಬೆಂಗಳೂರು.
3. ನಿರ್ದೇಶಕರು(ಪ್ರೌಢಶಿಕ್ಷಣ), ಆಯುಕ್ತರ ಕಛೇರಿ, ಸಾ.ಶಿ.ಇ., ಬೆಂಗಳೂರು.
4. ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಸಾ.ಶಿ.ಇ., ಬೆಂಗಳೂರು.
5. ನಿರ್ದೇಶಕರು, ಆರ್.ಎಂ.ಎಸ್.ಎ./ಎಸ್.ಎಸ್.ಎ., ಬೆಂಗಳೂರು.
6. ನಿರ್ದೇಶಕರು(ಪ್ರಭಾರಿ) ಮೈನಾರಿಟಿ ಹಾಗೂ ಸಹನಿರ್ದೇಶಕರು, ಎಸ್.ಎಸ್.ಎ., ಬೆಂಗಳೂರು.
7. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬೆಂಗಳೂರು.
8. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.
9. ಸಹನಿರ್ದೇಶಕರು(ಆಡಳಿತ), ಎಸ್.ಎಸ್.ಎ., ಬೆಂಗಳೂರು.
10. ಸಹನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ, ಬೆಂಗಳೂರು.
11. ಸಹನಿರ್ದೇಶಕರು, (ಶಾಲಾ ಶಿಕ್ಷಣ), ಆಯುಕ್ತರ ಕಛೇರಿ, ಸಾ.ಶಿ..ಇ., ಬೆಂಗಳೂರು.
12. ಉಪನಿರ್ದೇಶಕರು, ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು.
13. ಉಪನಿರ್ದೇಶಕರು(ಯೋಜನೆ) ಹಾಗೂ ಆಯುಕ್ತರ ಕಛೇರಿಯ ಅಧಿಕಾರಿಗಳು.
14. ಬೆಂಗಳೂರು ಮತ್ತು ಮೈಸೂರು ವಿಭಾಗದ ಜಿಲ್ಲಾ ಉಪನಿರ್ದೇಶಕರು(ಆಡಳಿತ)
15. ಉಪನಿರ್ದೇಶಕರು(ಅಭಿವೃದ್ಧಿ) ಹಾಗೂ ಡಿ.ವೈ.ಪಿ.ಸಿ ( ಎಸ್.ಎಸ್.ಎ. ಮತ್ತು ಆರ್.ಎಂ.ಎಸ್.ಎ.)
16. ಜಿಲ್ಲಾ ಅಕ್ಷರ ದಾಸೋಹ ಶಿಕ್ಷಣಾಧಿಕಾರಿಗಳು
17. ಶ್ರೀ ವಾಸುದೇವ್, ವ್ಯವಸ್ಥಾಪಕರು(ತಾಂತ್ರಿಕ ವಿಭಾಗ), ರಾಜೀವ್ ಗಾಂಧೀ ಗ್ರಾಮೀಣ ವಸತಿ ನಿಗಮ ನಿಯಮಿತ, ಬೆಂಗಳೂರು.
18. ಶಿಕ್ಷಕರ ವಸತಿ ಗೃಹಗಳ ನಿರ್ಮಾಣಕ್ಕೆ ಸಂಬಂಧಿಸಿದ ಜಿಲ್ಲಾ ಇಂಜಿನಿಯರ್‌ಗಳು, ನಿರ್ಮಿತಿ ಕೇಂದ್ರ.

ಬಂಗಾರಪೇಟೆಯ ಆದರ್ಶ ಶಾಲೆಯ ವಿದ್ಯಾರ್ಥಿಗಳಿಂದ ಪ್ರಾರ್ಥನೆ ಮತ್ತು ನಾಡಗೀತೆಯೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

ಶ್ರೀ ಎಚ್.ಡಿ. ಗೋವಿಂದಯ್ಯ, ಉಪನಿರ್ದೇಶಕರು(ಆಡಳಿತ), ಸಾ.ಶಿ.ಇ., ಕೋಲಾರ ಜಿಲ್ಲೆ, ಕೋಲಾರ ರವರು ಹಾಜರಿದ್ದ ಎಲ್ಲಾ ಆಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು. ಪ್ರಾರಂಭದ ಸಭೆಗೆ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಅತಿಥಿಗಳಾಗಿ ಭಾಗವಹಿಸಿದ್ದರು.

***ಶಾಲಾ ಸಂದರ್ಶನ/ಮೌಲ್ಯಮಾಪನ ಪ್ರಗತಿ:***

ಮಾನ್ಯ ಆಯುಕ್ತರು ಶಾಲಾ ಸಂದರ್ಶನ ಮತ್ತು ಮೌಲ್ಯಮಾಪನ ಕಾರ್ಯದ ಪ್ರಗತಿ ಮತ್ತು ಈ ಕುರಿತು ಆಯಾ ಜಿಲ್ಲೆಗಳ ಉಪನಿರ್ದೇಶಕರು(ಆಡಳಿತ) ರವರು ಪಡೆದಿರುವ ಶೇಕಡಾವಾರು ಅಂಕಗಳ ಬಗ್ಗೆ ಪ್ರಸ್ತಾಪಿಸುತ್ತಾ, ಎಲ್ಲಾ ಜಿಲ್ಲೆಗಳ ಫೆಬ್ರವರಿ 2012 ಮಾಹೆಯವರೆಗಿನ ಶಾಲಾ ಸಂದರ್ಶನ ಮತ್ತು ಮೌಲ್ಯಮಾಪನದ ವಿವರಗಳನ್ನು ಜಿಲ್ಲಾವಾರು ಪರಿಶೀಲಿಸಿದರು. 2011–12ನೇ ವರ್ಷದ ಶಾಲಾ ಸಂದರ್ಶನ/ಮೌಲ್ಯಮಾಪನದ ಪ್ರಗತಿಯನ್ನು ಮಾರ್ಚ್–2012 ರಲ್ಲಿ ಅಂತಿಮ ಮೌಲ್ಯ ಮಾಪನ ಮಾಡಿ ಅಂಕಗಳನ್ನು ನೀಡಲಾಗುವುದೆಂದು ತಿಳಿಸಿದರು. ಆದ್ದರಿಂದ ಈಗಾಗಲೇ ಪರಿಷ್ಕರಿಸಿ ನಿಗಧಿಪಡಿಸಿರುವ ಗುರಿಗಳಂತೆ ಎಲ್ಲಾ ಅಧಿಕಾರಿಗಳು ಶಾಲಾ ಸಂದರ್ಶನ/ಮೌಲ್ಯಮಾಪನ ಮಾಡಿ, ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಸಂಗ್ರಹಿಸುವಂತೆ ತಿಳಿಸಲಾಯಿತು.

ಇಲಾಖೆಯ ಅಧಿಕಾರಿಗಳಿಂದ ಶಾಲಾ ಸಂದರ್ಶನ ಮತ್ತು ಮೌಲ್ಯಮಾಪನಕ್ಕಾಗಿ ಹೊಸದಾಗಿ ಸರಳವಾದ ನಮೂನೆಯನ್ನು ಶ್ರೀ.ಬೆಳ್ಳಶೆಟ್ಟಿ, ಉಪನಿರ್ದೇಶಕರು, ಚಾಮರಜನಗರ, ಶ್ರೀ.ಹೆಚ್.ವಿ.ವೆಂಕಟೇಶಪ್ಪ ಉಪನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಮತ್ತು ಶ್ರೀ.ಜೈ ಕುಮಾರ್, ಕೇಂದ್ರಿಕೃತ ದಾಖಲಾತಿ ಘಟಕ, ಬೆಂಗಳೂರು ರವರುಗಳು ಸಿದ್ದಪಡಿಸಿದ್ದು, ನೋಡಲ್ ಅಧಿಕಾರಿಗಳ ಅಂತಿಮ ಪರಿಶೀಲನೆ ನಂತರ ಹೊಸ ನಮೂನೆಯನ್ನು  ನೀಡಲಾಗುವುದೆಂದು ತಿಳಿಸಿದರು.

ಪ್ರತಿಯೊಬ್ಬರು ಮೌಲ್ಯಮಾಪನಾ ಕಾರ್ಯವನ್ನು ಕ್ರಮವಾಗಿ ನಿರ್ವಹಿಸಿದಲ್ಲಿ ಮಾತ್ರ ಅಭಿವೃದ್ದಿಯನ್ನು ವ್ಯವಸ್ಥಿತವಾಗಿ ಕೈಗೊಳ್ಳಲು ಸಾಧ್ಯವಾಗುವುದು. ಪ್ರತಿ ತರಗತಿಗಳಲ್ಲಿ ಆಯಾ ತರಗತಿಗಳು ಮುಕ್ತಾಯದ ವೇಳೆಗೆ ಒಬ್ಬ ವಿದ್ಯಾರ್ಥಿಯು ಕಲಿಕೆಯಲ್ಲಿ ಸಾಧಿಸಬೇಕಾದ ಪ್ರಗತಿಗೆ ಸಂಬಂಧಿಸಿದಂತೆ, ತರಗತಿವಾರು ಕಲಿಕಾ ಮಟ್ಟವನ್ನು ನಿರ್ಧರಿಸಲು ಕ್ರಮವಹಿಸಲಾಗುತ್ತಿದೆ. ಉದಾಹರಣೆಗೆ 01ನೇ ತರಗತಿಯ ವಿದ್ಯಾರ್ಥಿ ಕನಿಷ್ಟ ಸರಳವಾದ ಇಪ್ಪತ್ತು ಪದಗಳನ್ನು ಸ್ಪಷ್ಟವಾಗಿ ಓದಲು ಮತ್ತು ಬರೆಯಲು ಕಲಿತಿರಬೇಕು. ಈ ನಿಟ್ಟಿನಲ್ಲಿ ಪರಿಶೀಲನಾ ಅಧಿಕಾರಿಗಳು ಪರಿಶೀಲಿಸಿ ಮೌಲ್ಯಾಂಕನ ಮಾಡಬೇಕು.

ಆದುದರಿಂದ ದೈನಂದಿನ ಕಛೇರಿ ಕಾರ್ಯಗಳೊಂದಿಗೆ ಮೌಲ್ಯಮಾಪನಾ ಕಾರ್ಯವನ್ನು ನಿಗಧಿತ ಗುರಿಯಂತೆ 2012–13ನೇ ಸಾಲಿನಲ್ಲಿ ಕೆ.ಎಸ್.ಕ್ಯೂ.ಎ.ಓ  ವತಿಯಿಂದ 04, 07 ಮತ್ತು 09 ನೇ ತರಗತಿಗಳ ಮೌಲ್ಯಮಾಪನಾ ಕಾರ್ಯವನ್ನು ವರ್ಷದ ಪ್ರಾರಂಭದಲ್ಲಿಯೇ ಒಂದು ತಿಂಗಳ ಕಾಲ ನಿರಂತರ ಮೌಲ್ಯಮಾಪನಾ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸಿ ಪೂರ್ಣಗೊಳಿಸಬೇಕು. ಈ ಸಂದರ್ಭದಲ್ಲಿ ಇಲಾಖಾಧಿಕಾರಿಗಳು, ಜುಲೈ 2005ರಿಂದ ಕಛೇರಿಯನ್ನು ಬಿಟ್ಟು ಸಂಬಂಧಿಸಿದ ಜಿಲ್ಲೆಗಳಲ್ಲಿ ತಂಗಿ ಒಂದು ತಿಂಗಳ ಕಾಲ ಶಾಲೆಗಳಲ್ಲಿ ಸಂದರ್ಶಿಸಿ ಮೌಲ್ಯಮಾಪನದಲ್ಲಿ ಭಾಗವಹಿಸಬೇಕು. ಮಕ್ಕಳ ಕಲಿಕಾ ಗುಣಮಟ್ಟವನ್ನು ಪರೀಕ್ಷಿಸಬೇಕು. ಪ್ರತಿಯೊಬ್ಬ ಉಪನಿರ್ದೇಶಕರನ್ನೊಳಗೊಂಡಂತೆ ಪ್ರತಿಯೊಬ್ಬ ಅಧಿಕಾರಿಗೂ ಗುರಿಯನ್ನು ನಿಗಧಿಪಡಿಸಲಾಗುವುದು. ಆರ್‌ಎಫ್‌ಡಿಗೆ ಸರಿಹೊಂದುವಂತೆ ಇರಬೇಕು. ಈಗಾಗಲೇ ಆರ್‌ಎಫ್‌ಡಿಯನ್ನು ರಾಜ್ಯ ಮಟ್ಟಕ್ಕೆ ಸಿದ್ಧಪಡಿಸಿದ್ದು, ಇದು ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳಿಗೂ ಅನ್ವಯಿಸುವಂತಿರಬೇಕು. ಸದರಿ ಆರ್‌ಎಫ್‌ಡಿಯನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಿದ್ದು, ಅದನ್ನು ಡೌನ್‌ಲೌಡ್ ಮಾಡಿಕೊಂಡು ಜಿಲ್ಲಾ ಮತ್ತು ತಾಲ್ಲೂಕು ಮಟ್ಟಕ್ಕೆ ಸಿದ್ಧಪಡಿಸಿಕೊಳ್ಳುವುದು. ಇದರಿಂದ ಜಿಲ್ಲಾ ಮಟ್ಟದ ಉಪನಿರ್ದೇಶಕರು ಮತ್ತು ತಾಲ್ಲೂಕು ಮಟ್ಟದ ಬಿಇಓ ರವರ ಪ್ರಗತಿಯನ್ನು ಪರೀಕ್ಷಿಸಬಹುದು.

***ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ ಜಾರಿ ಮತ್ತು ಶಾಲೆಯಿಂದ ಹೊರಗುಳಿದ ಮಕ್ಕಳ ದಾಖಲಾತಿ:***

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆಯಡಿ ಕಡ್ಡಾಯ ಶಿಕ್ಷಣ ನೀತಿಯಂತೆ ಶಾಲೆಗೆ ದಾಖಲಾಗದೇ ಉಳಿದಿರುವ ಹಾಗೂ ಶಾಲೆಯನ್ನು ತೊರೆದಿರುವ ಮಕ್ಕಳನ್ನು ಗುರ್ತಿಸುವ ಕಾರ್ಯ(ಸರ್ವೆ) ಸರ್ಕಾರೇತರ ಸಂಸ್ಥೆಗಳು ಮತ್ತು ಸಮುದಾಯದ ಸಹಭಾಗಿತ್ವದೊಂದಿಗೆ ನಡೆಸಿ, ಎಲ್ಲಾ ಮಕ್ಕಳನ್ನು ಮುಖ್ಯವಾಹಿನಿಗೆ ತರಲು

ಅಗತ್ಯ ಕ್ರಮವಾಗಬೇಕೆಂದು ತಿಳಿಸಿದರು. ಉಪನಿರ್ದೇಶಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಇತರೆ ಕೆಳಹಂತದ ಪರಿಶೀಲನಾ ಅಧಿಕಾರಿಗಳು ತಪ್ಪು ಮಾಹಿತಿ ನೀಡಬಾರದು. ಈ ಬಗ್ಗೆ ದೊಡ್ಡ ಪ್ರಮಾಣದ ಆಂದೋಲನ ಮಾಡಿ ಕೊಟ್ಟಿರುವ ಗುರಿ ಸಾಧಿಸುವ ಜವಾಬ್ದಾರಿ ಪ್ರತಿಯೊಬ್ಬ ಅಧಿಕಾರಿಗೂ ಇದೆ, ಅದರಂತೆ ಕಾರ್ಯ ಪ್ರವೃತ್ತರಾಗಲು ಸೂಚಿಸಿದರು. ಎಲ್ಲಾ ಉಪ ನಿರ್ದೇಶಕರುಗಳು ತಮ್ಮ ವ್ಯಾಪ್ತಿಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಗುರಿಯನ್ನು ನಿಗಧಿಪಡಿಸಿ ನಿರಂತರ ಮೇಲ್ವಿಚಾರಣೆ ನಡೆಸಿ ಪ್ರಗತಿಯನ್ನು ಸಾಧಿಸಲು ತಿಳಿಸಿದರು.

11 ವರ್ಷ ಮೇಲ್ಪಟ್ಟು 14 ವರ್ಷದೊಳಗಿನ ಶಾಲೆಯಿಂದ ಹೊರಗುಳಿದ ಮಕ್ಕಳಲ್ಲಿ ಎರಡು ವಿಧಗಳಿದ್ದು ಶಾಲೆಯಿಂದ ಡ್ರಾಪ್ ಔಟ್ ಆದವರು ಮತ್ತು ಶಾಲೆಗೆ ದಾಖಲಾಗದೇ ಉಳಿದವರು ಇಂತಹ ಮಕ್ಕಳನ್ನು ಗುರ್ತಿಸಿ ಸಮಾಜ ಕಲ್ಯಾಣ ಇಲಾಖೆಯ ದಿನಾಂಕ 12-08-2011 ರ ಸುತ್ತೋಲೆಯಲ್ಲಿ ಕಲ್ಪಿಸಿರುವ ಅವಕಾಶಗಳಂತೆ ಮಕ್ಕಳನ್ನು ಆಶ್ರಮ ಶಾಲೆ, ವಸತಿ ಶಾಲೆಗಳಿಗೆ ಸೇರಿಸುವ ನಿಟ್ಟಿನಲ್ಲಿ ಕ್ರಮ ವಹಿಸಲು ತಿಳಿಸಿದರು. ಹಾಗೂ ಮಕ್ಕಳಿಗೆ ಅಲ್ಪ ಸಂಖ್ಯಾತ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆ ವತಿಯಿಂದ ನಡೆಸುತ್ತಿರುವ ಹಾಸ್ಟೆಲ್ಲುಗಳಲ್ಲಿ ದಾಖಲು ಮಾಡಿಸಲು ತಿಳಿಸಿದರು.

ಸಿ.ಎ.ಎಲ್.ಸಿ. ಯೋಜನೆಯಡಿ ಬಿಡುಗಡೆಯಾಗಿರುವ ಅನುದಾನವನ್ನು ಸಮರ್ಪಕವಾಗಿ ಬಳಸಲು ತಿಳಿಸಿದರು. ಎಂಟನೆಯ ತರಗತಿಯ ವಿದ್ಯಾರ್ಥಿಗಳಿಗೆ ಅಯಾ ಜಿಲ್ಲೆಗಳಲ್ಲಿ ಪ್ರಸಿದ್ದಿಯಾಗಿರುವ ಕುಶಲ ಕೈಗಾರಿಕೆಗಳು, ಹೈನುಗಾರಿಕೆ, ರೇಷ್ಮೆ, ಕೃಷಿ, ಇತ್ಯಾದಿಗಳ ಬಗ್ಗೆ ಅರಿವು ಮೂಡಿಸುವ ದಿಸೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಅಗತ್ಯ ಕಾರ್ಯಕ್ರಮಗಳನ್ನು ಯೋಜಿಸಿ ಜಾರಿಗೊಳಿಸಲು ಸೂಚಿಸಿದರು.

ನಾಗರೀಕ ಸೇವಾ ಖಾತ್ರಿ ಸನ್ನದ್ದು ಜಾರಿಯಾಗಿದ್ದು, ಪ್ರಸ್ತುತ ಇದರಲ್ಲಿ ಶಿಕ್ಷಣ ಇಲಾಖೆಗೆ ಸಂಬಂದಿಸಿದ ಆರು ಸೇವೆಗಳು ಜಾರಿಗೆ ತರಲಾಗಿದ್ದು, ಈ ಸೇವೆಗಳನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸಲು ವೇಳಾಪಟ್ಟಿ ಮತ್ತು ನಿರ್ದೇಶನಗಳನ್ನು ಇಲಾಖೆಯಿಂದ ನೀಡಲಾಗಿದೆ. ಅದರಂತೆ ನಿಯಮಾನುಸಾರ ನಿಗಧಿತ ಕಾಲಾವಕಾಶದೊಳಗೆ ಕಾರ್ಯನಿರ್ವಹಿಸಲು ತಿಳಿಸಿದರು. ಅದರಂತೆ ಇಲಾಖೆಯ ಗ್ರಾಹಕರಾದ ವಿದ್ಯಾರ್ಥಿಗಳು ಮತ್ತು ಅವರ ಪೋಷಕರುಗಳಿಗೆ ಅಗತ್ಯ ಸೇವೆ ಒದಗಿಸಲು ಬದ್ದರಾಗಿರಬೇಕೆಂದು ಸೂಚಿಸಿದರು. ಇಲಾಖೆಯಿಂದ ಸಿದ್ಧಪಡಿಸಲಾಗುತ್ತಿರುವ ಆರ್.ಎಫ್.ಡಿ. ಮಾಹಿತಿಯಲ್ಲಿ ಉಪ ನಿರ್ದೇಶಕರ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೌಲ್ಯಮಾಪನಾ ಮಾಹಿತಿ ಪ್ರತಿಬಿಂಬಿಸಬೇಕು ಎಂದು ತಿಳಿಸಿದರು.

2012-13ನೇ ಸಾಲಿನಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಶಿಕ್ಷಣ ಸಂಸ್ಥೆಗಳ ವತಿಯಿಂದ ಇಲಾಖೆಗೆ ಸಲ್ಲಿಸಿರುವ ಖಾಸಗಿ ಶಾಲೆಗಳ ನೋಂದಣಿ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ದಿ: 31-03-2012 ರೊಳಗೆ ಇತ್ಯರ್ಥಪಡಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. 31-03-2012 ನಂತರ ಈ ಕುರಿತು ಯಾವುದೇ ಆದೇಶಗಳನ್ನು ಜಾರಿಗೊಳಿಸಬಾರದಾಗಿ ಸೂಚಿಸಿದರು. ಬಾಕಿ ಇರುವ ಪ್ರಕರಣಗಳ ಕುರಿತು ಎಲ್ಲಾ ಉಪ ನಿರ್ದೇಶಕರುಗಳು ಮಾಹಿತಿಯನ್ನು ಮೇಲಾಧಿಕಾರಿಗಳಿಗೆ ತುರ್ತಾಗಿ ಸಲ್ಲಿಸಲು ತಿಳಿಸಿದರು. ಜಿಲ್ಲೆಗಳಿಂದ ಸಲ್ಲಿಸಿರುವ ಮಾಹಿತಿಗಳನ್ನು ಪರಿಶೀಲಿಸಿ ಬಾಕಿ ಪ್ರಕರಣಗಳನ್ನು ನಿಯಮಾನುಸಾರ ಪರಿಗಣಿಸಿ ಇತ್ಯರ್ಥಪಡಿಸಲು ನಿರ್ದೇಶಕರು(ಪ್ರಾಥಮಿಕ ಶಿಕ್ಷಣ) ಮತ್ತು ನಿರ್ದೇಶಕರು(ಪ್ರೌಢಶಿಕ್ಷಣ) ರವರಿಗೆ ಸೂಚಿಸಿದರು.

ಫೆಬ್ರವರಿ 2012 ಮಾಹೆಯ ಮೌಲ್ಯಮಾಪನಾ ಪ್ರಗತಿಯನ್ನು ಜಿಲ್ಲಾವಾರು ಪರಿಶೀಲಿಸಿ, ಕೊಡಗು, ಮಂಡ್ಯ, ದಕ್ಷಿಣ ಕನ್ನಡ , ಉಡುಪಿ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಉತ್ತರ ಜಿಲ್ಲೆಗಳಲ್ಲಿ ಕಡಿಮೆ ಸಾಧನೆಯಾಗಿರುವ ಬಗ್ಗೆ ವಿಷಾದ ವ್ಯಕ್ತಪಡಿಸಿ ಅಗತ್ಯ ಪರಿಹಾರ ಕ್ರಮ ಕೈಗೊಳ್ಳಲು ತಿಳಿಸಿದರು. ಮೌಲ್ಯ ಮಾಪನಾ ಕಾರ್ಯ ನಡೆಸಿದ ನಂತರ ಕೊರತೆ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ಮಾಹಿತಿ ಸಲ್ಲಿಸಲು ತಿಳಿಸಿದರು.

***ಕುಡಿಯುವ ನೀರು ಮತ್ತು ಶೌಚಾಲಯ ಕಾಮಗಾರಿಗಳು :***

ಕುಡಿಯುವ ನೀರು ಮತ್ತು ಶೌಚಾಲಯ ಕಾಮಗಾರಿಗಳನ್ನು ಪೂರೈಸಿದ್ದು ಈ ಕುರಿತು ಇಲಾಖೆಯಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳಿಗೆ ಅಫಿಡವಿಟ್ ಸಲ್ಲಿಸಲಾಗಿದೆ. ಈ ಕುರಿತು ಪ್ರತಿಯೊಂದು ಜಿಲ್ಲೆಯಿಂದ ಶ್ವೇತ ಪತ್ರ ಹೊರಡಿಸಬೇಕಾಗಿದೆ. ಸರ್ವ ಶಿಕ್ಷಣ ಅಭಿಯಾನ, ರಾಜ್ಯ ವಲಯ ಯೋಜನೆ ಮತ್ತು ಜಿಲ್ಲಾ ಪಂಚಾಯತ್ ವತಿಯಿಂದ ಯಾವ ಯಾವ ಶಾಲೆಗಳಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ ಹಾಗೂ ಎಷ್ಟು ಅನುದಾನ ವೆಚ್ಚವಾಗಿದೆ ಎಂಬ ಬಗ್ಗೆ ಪೂರ್ಣವಾದ ಶಾಲಾವಾರು ಮಾಹಿತಿಯನ್ನು ಹತ್ತು ದಿನಗಳೊಳಗೆ ಸಿದ್ದಪಡಿಸಿ ಆನ್ ಲೈನ್ ಮೂಲಕ ಸಲ್ಲಿಸಲು ಸೂಚಿಸಲಾಗಿತ್ತುಹಾಗೂ ಮಾಹಿತಿಯನ್ನು ಆಯಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳ ಅವಗಾಹನೆಗೆ ಸಲ್ಲಿಸಿ, ದೃಡೀಕರಣ ಪಡೆದು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ ಶ್ವೇತ ಪತ್ರವನ್ನು ಹೊರಡಿಸಲು ಕ್ರಮ ಕೈಗೊಳ್ಳಲು ನಿರ್ದೇಶಿಸಿದರು. ವಿವಿಧ ಜಿಲ್ಲೆಗಳಲ್ಲಿ ಅಪೂರ್ಣವಾಗಿರುವ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸಿ, ತಕರಾರು ಇರುವ ಶಾಲೆಗಳ ಕಾಮಗಾರಿಗಳನ್ನು ಇತ್ಯರ್ಥಪಡಿಸಿ ಪೂರ್ಣಗೊಳಿಸಲು ಸೂಚಿಸಿದರು.

ಎಲ್ಲಾ ಉಪನಿರ್ದೇಶಕರು ದಿ: 27.01.2012ರಂದು ನೀಡಿರುವ ಸುತ್ತೋಲೆಯಂತೆ ಅನುಬಂಧ–1ಎ ಬಿ ಮತ್ತು ಅನುಬಂಧ–2 ಎ ಬಿ ರಲ್ಲಿ ಪ್ರತಿ ಪ್ರಾಥಮಿಕ ಮತ್ತು ಪ್ರೌಢಶಾಲೆಯ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸಿರುವ ಮಾಹಿತಿಯ ಸಾಫ್ಟ್ ಕಾಪಿಯನ್ನು ರಾಜ್ಯ ಉಚ್ಚ ನ್ಯಾಯಾಲಯಕ್ಕೆ ತುರ್ತಾಗಿ ನೀಡಬೇಕಾಗಿರುವುದರಿಂದ ತಪ್ಪದೇ ಶ್ರೀ.ನಾಗೇಶ್, ಎಸ್‌ಎಸ್‌ಎ ಪ್ರೋಗ್ರಾಮರ್ ಇವರ ಇ–ಮೇಲ್ ವಿಳಾಸಕ್ಕೆ ಹತ್ತು ದಿನಗಳೊಳಗೆ ಸಲ್ಲಿಸಲು ಮಾನ್ಯ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಜಿಲ್ಲಾ ಉಪನಿರ್ದೇಶಕರು[ಆಡಳಿತ] ಇವರಿಗೆ ಆದೇಶಿಸಿದರು.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯ ಒದಗಿಸಿರುವ ಮತ್ತು ನಿರ್ವಹಣೆ ಬಗ್ಗೆ ವಿವರ

ಅಜೆಂಡಾ 1

**ಪ್ರಾಥಮಿಕ ಕುಡಿಯುವ ನೀರು 1/ 00-01 'ಭೌತಿಕ ಪ್ರಗತಿ( 08.03.2012 ರಂತೆ ನಮೂದಿಸುವುದು.**

| ಕ್ರ- ಸಂ- | ಜಿಲ್ಲೆಗಳು | ಒಟ್ಟು ಶಾಲೆಗಳ ಸಂಖ್ಯೆ | ಕುಡಿಯುವ ನೀರಿನ ಸೌಲಭ್ಯವಿರುವ ಶಾಲೆಗಳ ಸಂಖ್ಯೆ | ಕುಡಿಯುವ ನೀರಿನ ಸೌಲಭ್ಯಗಳಿಲ್ಲದ ಶಾಲೆಗಳ ಸಂಖ್ಯೆ | ನಿರ್ವಹಣೆ ಮಾಡಲಾಗುತ್ತಿರುವ ಶಾಲೆಗಳ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು( ಗ್ರಾ( | 1142 | 1142 | 0 | 1142 |
| 2 | ಬೆಂಗಳೂರು ಉತ್ತರ | 527 | 527 | 0 | 527 |
| 3 | ಬೆಂಗಳೂರು ದಕ್ಷಿಣ | 919 | 919 | 0 | 919 |
| 4 | ರಾಮನಗರ | 1424 | 1424 | 0 | 1424 |
| 5 | ಕೋಲಾರ | **1902** | **1902** | **0** | **1902** |
| 6 | ಚಿಕ್ಕಬಳ್ಳಾಪುರ | 1596 | 1596 | 0 | 1596 |
| 7 | ದಾವಣಗೆರೆ | 1399 | 1399 | 0 | 1399 |
| 8 | ಚಿತ್ರದುರ್ಗ | 1734 | 1734 | 00 | 1734 |
| 9 | ಶಿವಮೊಗ್ಗ | 1942 | 1942 | 0 | 1942 |
| 10 | ತುಮಕೂರು | 2270 | 2270 | 0 | 2270 |
| 11 | ಮಧುಗಿರಿ | 1333 | 1333 | 0 | 1333 |

ಅಜೆಂಡಾ-1(ಪ್ರಾಥಮಿಕ ಕುಡಿಯುವ ನೀರು)

| ಕ್ರ ಸಂ- | ಜಿಲ್ಲೆಗಳು | ಒಟ್ಟು ಶಾಲೆಗಳ ಸಂಖ್ಯೆ | ಕುಡಿಯುವ ನೀರಿನ ಸೌಲಭ್ಯವಿರುವ ಶಾಲೆಗಳ ಸಂಖ್ಯೆ | ಕುಡಿಯುವ ನೀರಿನ ಸೌಲಭ್ಯಗಳಿಲ್ಲದ ಶಾಲೆಗಳ ಸಂಖ್ಯೆ | ನಿರ್ವಹಣೆ ಮಾಡಲಾಗುತ್ತಿರುವ ಶಾಲೆಗಳ ಸಂಖ್ಯೆ |
|---|---|---|---|---|---|
| 1 | ಮೈಸೂರು | 2008 | 2008 | 0 | 2008 |
| 2 | ಮಂಡ್ಯ | 1838 | 1838 | 0 | 1838 |
| 3 | ಚಾಮರಾಜನಗರ | 810 | 810 | 0 | 810 |
| 4 | ಹಾಸನ | 2631 | 2631 | 0 | 2631 |
| 5 | ಚಿಕ್ಕಮಗಳೂರು | 1545 | 1545 | 0 | 1545 |
| 6 | ಕೊಡಗು | 427 | 427 | 0 | 427 |
| 7 | ದಕ್ಷಿಣ ಕನ್ನಡ | 956 | 956 | 0 | 956 |
| 8 | ಉಡುಪಿ | 629 | 629 | 0 | 629 |

ಅಜೆಂಡಾ-2
ಪ್ರೌಢಶಾಲಾ ಕುಡಿಯುವ ನೀರು 1/ 00-01 'ಬೌತಿಕ ಪ್ರಗತಿ(
**08.03.2012** ರಂತೆ ನಮೂದಿಸುವುದು.

| ಕ್ರ- ಸಂ- | ಜಿಲ್ಲೆಗಳು | ಒಟ್ಟು ಶಾಲೆಗಳ ಸಂಖ್ಯೆ | ಕುಡಿಯುವ ನೀರಿನ ಸೌಲಭ್ಯವಿರುವ ಶಾಲೆಗಳ ಸಂಖ್ಯೆ | ಕುಡಿಯುವ ನೀರಿನ ಸೌಲಭ್ಯಗಳಿಲ್ಲದ ಶಾಲೆಗಳ ಸಂಖ್ಯೆ | ನಿರ್ವಹಣೆ ಮಾಡಲಾಗುತ್ತಿರುವ ಶಾಲೆಗಳ ಸಂಖ್ಯೆ |
|---|---|---|---|---|---|
| 1 | ಬೆಂಗಳೂರು(ಗ್ರಾ( | **59** | **59** | 0 | **59** |
| 2 | ಬೆಂಗಳೂರು (ಉತ್ತರ) | **52** | **52** | 0 | **52** |
| 3 | ಬೆಂಗಳೂರು ದಕ್ಷಿಣ | **80** | **80** | 0 | **80** |
| 4 | ರಾಮನಗರ | **106** | **106** | 0 | **106** |
| 5 | ಕೋಲಾರ | **115** | **115** | **0** | **115** |
| 6 | ಚಿಕ್ಕಬಳ್ಳಾಪುರ | **106** | **106** | 0 | **106** |
| 7 | ದಾವಣಗೆರೆ | **152** | **041** | 0 | **152** |
| 8 | ಚಿತ್ರದುರ್ಗ | **109** | **109** | 00 | **109** |
| 9 | ಶಿವಮೊಗ್ಗ | **155** | **155** | 0 | **155** |
| 10 | ತುಮಕೂರು | **133** | **133** | 0 | **133** |
| 11 | ಮಧುಗಿರಿ | **94** | **94** | 0 | **94** |

ಅಜೆಂಡಾ-2(ಪ್ರೌಢಶಾಲಾ ಕುಡಿಯುವ ನೀರು)

| ಕ್ರ-ಸಂ- | ಜಿಲ್ಲೆಗಳು | ಒಟ್ಟು ಶಾಲೆಗಳ ಸಂಖ್ಯೆ | ಕುಡಿಯುವ ನೀರಿನ ಸೌಲಭ್ಯವಿರುವ ಶಾಲೆಗಳ ಸಂಖ್ಯೆ | ಕುಡಿಯುವ ನೀರಿನ ಸೌಲಭ್ಯಗಳಿಲ್ಲದ ಶಾಲೆಗಳ ಸಂಖ್ಯೆ | ನಿರ್ವಹಣೆ ಮಾಡಲಾಗುತ್ತಿರುವ ಶಾಲೆಗಳ ಸಂಖ್ಯೆ |
|---|---|---|---|---|---|
| 1 | ಮೈಸೂರು | 216 | 216 | 0 | 216 |
| 2 | ಮಂಡ್ಯ | 214 | 214 | 0 | 214 |
| 3 | ಚಾಮರಾಜನಗರ | 84 | 82 | 0 | 82 |
| 4 | ಹಾಸನ | 241 | 240 | 0 | 240<br>1 ಶಾಲೆ ಮುಚ್ಚಿದೆ |
| 5 | ಚಿಕ್ಕಮಗಳೂರು | 116 | 116 | 0 | 116 |
| 6 | ಕೊಡಗು | 47 | 47 | 0 | 0 |
| 7 | ದಕ್ಷಿಣ ಕನ್ನಡ | 160 | 160 | 0 | 160 |
| 8 | ಉಡುಪಿ | 106 | 106 | 0 | 0 |

2010–11ನೇ ಸಾಲಿನ ಶೌಚಾಲಯ:–

2010–11ರ ಪಂಚ ಸೌಲಭ್ಯದಡಿ ಶೌಚಾಲಯ ನಿರ್ಮಾಣಕ್ಕಾಗಿ ಬಿಡುಗಡೆಯಾಗಿರುವ ಅನುದಾನ ಎಲ್ಲಾ ಜಿಲ್ಲೆಗಳಿಂದ ಬಳಕೆಯಾಗಿ ಕಾಮಗಾರಿ ಪೂರ್ಣಗೊಂಡಿದ್ದು, ಮಧುಗಿರಿ ಜಿಲ್ಲೆಯ ಒಂದು ಶಾಲೆ ಬದಲಾವಣೆಗೆ ಸೂಚಿಸಿದ್ದು, ಅದನ್ನು ಪೂರ್ಣಗೊಳಿಸಲು ತಿಳಿಸಿದರು.

ಉಡುಪಿಯಲ್ಲಿ ಒಂದು ಶಾಲೆಯಲ್ಲಿ ನ್ಯಾಯಾಲಯದಲ್ಲಿ ತಕರಾರು ಇರುವುದಾಗಿ ತಿಳಿಸಿದ್ದು, ಅದನ್ನು ಇತ್ಯರ್ಥಪಡಿಸಿ ಪೂರ್ಣಗೊಳಿಸಲು ಸೂಚಿಸಿದರು.

2010–11ನೇ ಸಾಲಿನ ಕುಡಿಯುವ ನೀರು:–

ಮಧುಗಿರಿ ಒಂದು ಶಾಲೆ ಬದಲಾವಣೆ ಇರುವುದಾಗಿ ತಿಳಿಸಿದ್ದು, ಅದನ್ನು ಸರಿಪಡಿಸಲು ತಿಳಿಸಿದರು. ಶಿವಮೊಗ್ಗ ಐದು ಶಾಲೆಗಳಲ್ಲಿ ಕುಡಿಯುವ ನೀರಿಗಾಗಿ ಬೋರ್‌ವೆಲ್ ತೆಗೆಸಿದ್ದು, ಹಣ ಹಿಂದಿರುಗಿಸಿದೆ ಎಂದು ತಿಳಿಸಿರುತ್ತಾರೆ. ಹಿಂದಿರುಗಿಸಲು ಬರುವುದಿಲ್ಲ ಕೂಡಲೇ ಕುಡಿಯುವ ನೀರನ್ನು ಒದಗಿಸಲು ತಿಳಿಸಿದರು.

ಕೊಡಗು ಜಿಲ್ಲೆಯಲ್ಲಿ ಅಗತ್ಯವಿರುವ ಬೇರೆ ಶಾಲೆಗೆ ನೀಡಿರುವುದಾಗಿ ಉಪನಿರ್ದೇಶಕರು ತಿಳಿಸಿದರು.

2010–11ನೇ ಸಾಲಿನ ಕಾಂಪೌಂಡ್ ನಿರ್ಮಾಣ:–

2010–11ನೇ ಸಾಲಿನಲ್ಲಿ ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಚಿತ್ರದುರ್ಗ, ದಾವಣಗೆರೆ, ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ದಕ್ಷಿಣ ಕನ್ನಡ ಹಾಗೂ ಉಡುಪಿ ಪೂರ್ಣಗೊಳಿಸುವುದಾಗಿ ತಿಳಿಸಿರುತ್ತಾರೆ.

ಕೋಲಾರ ನಗರದ ಒಂದು ಶಾಲೆಯಲ್ಲಿ ಕಾಮಗಾರಿ ಸಮಸ್ಯೆ ಸರಿಪಡಿಸುವುದಾಗಿ ತಿಳಿಸಿರುತ್ತಾರೆ. ಶಿವಮೊಗ್ಗದಲ್ಲಿ ಎರಡು ಶಾಲೆಗಳಿಗೆ ಪೂರ್ಣಗೊಳಿಸಬೇಕಾಗಿರುವುದಾಗಿ ತಿಳಿಸಿರುತ್ತಾರೆ. ಕೊಡಗು ಜಿಲ್ಲೆಯಲ್ಲಿ ಕಾಂಪೌಂಡ್ ನಿರ್ಮಿಸಲು ಒಂದು ಶಾಲೆಯಲ್ಲಿ ಮರಗಳ ಸಮಸ್ಯೆಯಿದ್ದು, ಅದನ್ನು ಸರಿಪಡಿಸುವುದಾಗಿ ಉಪನಿರ್ದೇಶಕರುಗಳು ತಿಳಿಸಿದರು.

2010–11ನೇ ಸಾಲಿನಲ್ಲಿ ಪಂಚ ಸೌಲಭ್ಯದಡಿ ಕೊಠಡಿ ನಿರ್ಮಾಣ ರಾಮನಗರ ಜಿಲ್ಲೆಯಲ್ಲಿ ಮೂರು ಶಾಲೆಗಳಲ್ಲಿ ಪಾಯದ ಹಂತದಲ್ಲಿರುತ್ತದೆ ಎಂದು ತಿಳಿಸಿರುತ್ತಾರೆ. ಚಿಕ್ಕಬಳ್ಳಾಪುರ ಎರಡು ಶಾಲೆ ಲಿಂಟಲ್, ಶಿವಮೊಗ್ಗ ಐದು ಕೊಠಡಿ ಪಾಯದಲ್ಲಿದ್ದು, ಜೂನ್‌ನಲ್ಲಿ ಪೂರ್ಣಗೊಳಿಸುವುದಾಗಿ ತಿಳಿಸಿದರು. ಎರಡು ಛಾವಣಿಯಲ್ಲಿದ್ದು, ಏಪ್ರಿಲ್‌ನಲ್ಲಿ ಪೂರ್ಣಗೊಳಿಸುವುದಾಗಿ ಉಪನಿರ್ದೇಶಕರು ತಿಳಿಸಿದರು. ಚಿತ್ರದುರ್ಗದಲ್ಲಿ ಎರಡು ಕೊಠಡಿಗಳು ಪಾಯದಲ್ಲಿದ್ದು, ಜೂನ್ 2012ರೊಳಗೆ ಪೂರ್ಣಗೊಳಿಸುವುದಾಗಿ ಉಪನಿರ್ದೇಶಕರು ತಿಳಿಸಿರುತ್ತಾರೆ. ಮೈಸೂರು ಜಿಲ್ಲೆಯಲ್ಲಿ ಮೂರು ಲಿಂಟಲ್, 10 ಛಾವಣಿಯಲ್ಲಿದ್ದು, ಇದನ್ನು ಎರಡು ತಿಂಗಳೊಳಗಾಗಿ ಪೂರ್ಣಗೊಳಿಸುವುದಾಗಿ ಉಪನಿರ್ದೇಶಕರು ತಿಳಿಸಿದರು. ಚಾಮರಾಜನಗರದಲ್ಲಿ ಎರಡು ಮೇಲ್ಚಾವಣಿಯಲ್ಲಿದ್ದು, ಏಪ್ರಿಲ್ ಒಳಗಾಗಿ ಪೂರ್ಣಗೊಳಿಸುವುದಾಗಿ ಉಪನಿರ್ದೇಶಕರು ತಿಳಿಸಿದರು. ಚಿಕ್ಕಮಗಳೂರು ನಾಲ್ಕು ಛಾವಣಿ ಹಂತದಲ್ಲಿದ್ದು 2012 ಏಪ್ರಿಲ್‌ನಲ್ಲಿ ಪೂರ್ಣಗೊಳಿಸುವುದಾಗಿ ತಿಳಿಸಿದರು. ಉಡುಪಿ ಜಿಲ್ಲೆಯಲ್ಲಿ ಒಂದು ಪಾಯದಲ್ಲಿದ್ದು ಅದನ್ನು 7 ಛಾವಣಿಯಲ್ಲಿ ಹಂತದಲ್ಲಿದ್ದು, ಅವುಗಳನ್ನು 2012 ಮಾರ್ಚ್ ಒಳಗಾಗಿ ಪೂರ್ಣಗೊಳಿಸುವುದಾಗಿ ಉಪನಿರ್ದೇಶಕರು ತಿಳಿಸಿದರು.

2009–10ನೇ ಸಾಲಿನಲ್ಲಿ ಯೋಜನೆಯಡಿ ನಗರ/ಪಟ್ಟಣ ಪ್ರದೇಶದ ಪ್ರೌಢಶಾಲಾ ಕೊಠಡಿ ನಿರ್ಮಾಣಕ್ಕೆ ನೀಡಿದ್ದ ಅನುದಾನ ಪೂರ್ಣ ಬಳಕೆ ಮಾಡಿ ಬೆಂಗಳೂರು ಉತ್ತರ, ದಕ್ಷಿಣ, ಗ್ರಾಮಾಂತರ ಜಿಲ್ಲೆಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿರುವುದಾಗಿ ಉಪನಿರ್ದೇಶಕರು ತಿಳಿಸಿದರು. ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಮಧುಗಿರಿ, ದಾವಣಗೆರೆ, ಚಿಕ್ಕಮಗಳೂರು, ಉಡುಪಿ, ಶಿವಮೊಗ್ಗ ಜಿಲ್ಲೆಗಳಿಗೆ ನೀಡಿದ ಅನುದಾನ ಬಳಕೆಯಾಗಿದ್ದು, ಪೂರ್ಣಗೊಳಿಸಿರುವುದಾಗಿ ಉಪನಿರ್ದೇಶಕರು ವರದಿ ನೀಡಿರುತ್ತಾರೆ.

2010–11ನೇ ಸಾಲಿನಲ್ಲಿ ಯೋಜನೇತರಡಿ ಪ್ರೌಢಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನವನ್ನು ಬೆಂಗಳೂರು ಉತ್ತರ/ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ ಮತ್ತು ಮಧುಗಿರಿ ಪೂರ್ಣಗೊಳಿಸಿದ್ದು, ಬೆಂಗಳೂರು ದಕ್ಷಿಣ ರವರು 17 ಕೊಠಡಿ ಪೂರ್ಣಗೊಳಿಸಿದ್ದು, ಉಳಿದ ಮೂರು ಪಾಯ ಐದು ಲಿಂಟಲ್ ಹಂತದಲ್ಲಿದ್ದು, ಎಸ್‌ಡಿಎಂಸಿಗೆ ನೀಡಿದ್ದು, ಜೂನ್ 2012ರ ಒಳಗಾಗಿ ಪೂರ್ಣಗೊಳಿಸುವುದಾಗಿ ಉಪನಿರ್ದೇಶಕರು ಸಭೆಗೆ ತಿಳಿಸಿದರು.

2011–12ನೇ ಸಾಲಿನಲ್ಲಿ ಉಪನಿರ್ದೇಶಕರು ಮತ್ತು ಬಿಇಓ ಕಛೇರಿಗಳ ಕಟ್ಟಡ ನಿರ್ಮಾಣ ಮತ್ತು ದುರಸ್ತಿಗಾಗಿ ನೀಡಿರುವ ಅನುದಾನವನ್ನು ಡ್ರಾ ಮಾಡಿದ್ದು, ಕಾಮಗಾರಿ ಪ್ರಗತಿಯಲ್ಲಿರುವುದಾಗಿ ಮೈಸೂರು, ಬೆಂಗಳೂರು ಗ್ರಾಮಾಂತರ/ದಕ್ಷಿಣ, ತುಮಕೂರು ಮತ್ತು ದಕ್ಷಿಣ ಕನ್ನಡ ಇವರು ಸಭೆಗೆ ತಿಳಿಸಿದರು. ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಅನುದಾನ ಕೊರತೆ ಇರುವುದಾಗಿ ಉಪನಿರ್ದೇಶಕರು ಸಭೆಗೆ ತಿಳಿಸಿದರು.

***ಪ್ರೌಢಶಾಲಾ ಕಟ್ಟಡ ಮತ್ತು ಕಾಂಪೌಂಡ್ ಕಾಮಗಾರಿಗಳು :***

ಪ್ರೌಢಶಾಲೆಗಳಲ್ಲಿನ ಕಾಂಪೌಂಡ್ ಕಾಮಗಾರಿಗಳು ಬಾಕಿ ಇರುವ ಕುರಿತು ಪರಿಶೀಲಿಸಿ ಜೂನ್ 2012 ಮಾಹೆಯೊಳಗೆ ಶೀಘ್ರವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ತಿಳಿಸಿದರು. ಮೈಸೂರು ಜಿಲ್ಲೆಗೆ ಬಿಡುಗಡೆಯಾಗಿರುವ ಅನುದಾನವನ್ನು ರೌಂಡ್ ಟೇಬಲ್ ರವರು ಸಹಭಾಗಿತ್ವದಲ್ಲಿ ಸಮಾನವಾಗಿ ಅನುದಾನ ನೀಡಿ ಭರಿಸಿದಲ್ಲಿ ಅವರಿಂದ ನಿರ್ವಹಿಸಲು ತಿಳಿಸಿದರು. ಸಮಾನ ವೆಚ್ಚ ಭರಿಸದಿದ್ದಲ್ಲಿ ಕಾಮಗಾರಿಯನ್ನು ಶಾಲಾ ಎಸ್.ಡಿ.ಎಂ.ಸಿ. ವತಿಯಿಂದಲೇ ಪೂರ್ಣಗೊಳಿಸಲು ಕ್ರಮವಹಿಸಲು ಉಪನಿರ್ದೇಶಕರಿಗೆ ಸೂಚಿಸಿದರು.

***ಆರ್.ಐ.ಡಿ.ಎಫ್. ಕಟ್ಟಡ ಕಾಮಗಾರಿಗಳು :***

ಆರ್.ಐ.ಡಿ.ಎಫ್. 12, 13, ಹಂತದಡಿ ಜಿಲ್ಲೆಗಳಿಗೆ ಮಂಜೂರಾಗಿರುವ ಕಟ್ಟಡ ನಿರ್ಮಾಣ ಕಾಮಗಾರಿಗಳ ಪ್ರಗತಿಯನ್ನು ಪರಿಶೀಲಿಸುತ್ತಾ, ಈವರೆವಿಗೂ ಪ್ರಾರಂಭಿಸದೇ ಇರುವ ಕಾಮಗಾರಿಗಳನ್ನು ಕೈಬಿಡಲು ನಿರ್ಧರಿಸಲಾಯಿತು. ಹಾಗೂ ಈ ಕುರಿತು ಯಾವುದೇ ರೀತಿಯಲ್ಲಿ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಲು ಸಾಧ್ಯವಿರುವುದಿಲ್ಲವೆಂದು ಮಾನ್ಯ ಆಯುಕ್ತರು ತಿಳಿಸಿದರು.

ಆರ್‌ಐಡಿಎಫ್–12ರಡಿ ಮಧುಗಿರಿ ಜಿಲ್ಲೆಯಲ್ಲಿ 7 ಅಂತಿಮ ಹಂತದಲ್ಲಿದ್ದು, ಮಾರ್ಚ್ 31ರೊಳಗೆ ಪೂರ್ಣಗೊಳಿಸದಿದ್ದಲ್ಲಿ ಡ್ರಾಪ್ ಮಾಡಿಸುವುದಾಗಿ ಆಯುಕ್ತರು ಉಪನಿರ್ದೇಶಕರಿಗೆ ಎಚ್ಚರಿಕೆ ನೀಡಿದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2 ಕೊಠಡಿ ಅಂತಿಮ ಹಂತದಲ್ಲಿದ್ದು, ಏಪ್ರಿಲ್ ಒಳಗೆ ಪೂರ್ಣಗೊಳಿಸುವುದಾಗಿ ಉಪನಿರ್ದೇಶಕರು ತಿಳಿಸಿದರು, ತುಮಕೂರು 2 ಪಾಯದಲ್ಲಿದ್ದು, ಚಿತ್ರದುರ್ಗ ಐದು ಲಿಂಟಲ್ ಇದ್ದು, ಮಂಡ್ಯ 14 ಲಿಂಟಲ್, 15 ಛಾವಣಿಯಲ್ಲಿದ್ದು, ಏಪ್ರಿಲ್ ಒಳಗೆ ಪೂರ್ಣಗೊಳಿಸುವುದಾಗಿ ಉಪನಿರ್ದೇಶಕರು ತಿಳಿಸಿದರು.

ಆರ್‌ಐಡಿಎಫ್–13ರಡಿ ಬೆಂಗಳೂರು ಗ್ರಾಮಾಂತರ 10 ಛಾವಣಿ 22 ಅಂತಿಮ ಇದ್ದು, ಇದನ್ನು ಶೀಘ್ರ ಪೂರ್ಣಗೊಳಿಸಲು ಮಾನ್ಯ ಆಯುಕ್ತರು ಉಪನಿರ್ದೇಶಕರಿಗೆ ತಿಳಿಸಿದರು. ರಾಮಗನರ 2 ಪಾಯ ಹಂತದಲ್ಲಿದ್ದು, ಮಾರ್ಚ್ 31 2012ರೊಳಗೆ ಪೂರ್ಣಗೊಳಿಸುವುದಾಗಿ ತಿಳಿಸಿದರು. ಕೋಲಾರ 5 ಛಾವಣಿ 11 ಅಂತಿಮ ಹಂತದಲ್ಲಿದ್ದು, ಶೀಘ್ರ ಪೂರ್ಣಗೊಳಿಸುವುದಾಗಿ ತಿಳಿಸಿದರು. 1ನ್ನು ಡ್ರಾಪ್ ಮಾಡಲು ತಿಳಿಸಿದರು. ತುಮಕೂರು ಜಿಲ್ಲೆಯಲ್ಲಿ 2 ಕೊಠಡಿ ಡ್ರಾಪ್ ಮಾಡಲು ತಿಳಿಸಿದರು. ಮಧುಗಿರಿ 4 ಪಾಯದಲ್ಲಿದ್ದು, ಜುಲೈ 2012ರೊಳಗೆ ಮತ್ತು 4 ಲಿಂಟಲ್ ಹಂತದಲ್ಲಿದ್ದು, 8 ಛಾವಣಿಯಲ್ಲಿದ್ದು, ಇವುಗಳನ್ನು ಮೇ 2012ರೊಳಗೆ ಪೂರ್ಣಗೊಳಿಸುವುದಾಗಿ ಉಪನಿರ್ದೇಶಕರು ಸಭೆಗೆ ತಿಳಿಸಿದರು.

ಚಿತ್ರದುರ್ಗ ಒಂದು ಪಾಯ ಹಂತದಲ್ಲಿದ್ದು, ಮೇ ಅಂತ್ಯದೊಳಗೆ ಪೂರ್ಣಗೊಳಿಸುವುದಾಗಿ ಹಾಗೂ ಮೂರು ಕೊಠಡಿಗಳನ್ನು ಕೈ ಬಿಡಲು ತಿಳಿದರು. ಕೈ ಬಿಡಬೇಕಾದ ಕೊಠಡಿಗಳ ಬಗ್ಗೆ ಸಂಬಂಧಿಸಿದ ಉಪನಿರ್ದೇಶಕರು ಲಿಖಿತವಾಗಿ ಸಿಇಓ ಅಭಿಪ್ರಾಯದೊಂದಿಗೆ ಪತ್ರ ನೀಡಬೇಕಾಗಿ ಮಾನ್ಯ ಆಯುಕ್ತರು ಸಭೆಗೆ ತಿಳಿಸಿದರು.

ಹಾಸನ ನಾಲ್ಕು ಪಾಯ ಆರು ಲಿಂಟಲ್, 16 ಛಾವಣಿ, 49 ಅಂತಿಮ ಹಂತದಲ್ಲಿದ್ದು, ಇವುಗಳನ್ನು ಜೂನ್ 2012ರೊಳಗೆ ಎಲ್ಲವನ್ನು ಪೂರ್ಣಗೊಳಿಸುವುದಾಗಿ ಉಪನಿರ್ದೇಶಕರು ಸಭೆಗೆ ತಿಳಿಸಿದರು.

ಚಿಕ್ಕಮಗಳೂರು ಆರು ಛಾವಣಿ ಏಳು ಅಂತಿಮ ಹಂತದಲ್ಲಿದ್ದು, ಉಳಿದ ಏಳನ್ನು ಪ್ರಾರಂಭಿಸಬೇಕಾಗಿದ್ದು, ಅವುಗಳನ್ನು ಸಕಾಲಕ್ಕೆ ಪೂರ್ಣಗೊಳಿಸಿವುದಾಗಿ ಉಪನಿರ್ದೇಶಕರು ತಿಳಿಸಿದರು.

ದಕ್ಷಿಣ ಕನ್ನಡ ಆರು ಫ್ಲಿಂತ್ ಹಂತದಲ್ಲಿ ನಾಲ್ಕು ಲಿಂಟಲ್ 26 ಛಾವಣಿ, 22 ಅಂತಿಮ ಹಂತದಲ್ಲಿದ್ದು, ಜೂನ್ 2012ರೊಳಗೆ ಇವುಗಳನ್ನು ಪೂರ್ಣಗೊಳಿಸುವುದಾಗಿ ತಿಳಿಸಿದರು.

ಉಡುಪಿ ಮಾರ್ಚ್ ಅಂತ್ಯದೊಳಗೆ ಅಂತಿಮ ಹಂತದ 10 ಕೊಠಡಿಗಳನ್ನು ಪೂರ್ಣಗೊಳಿಸುವುದಾಗಿ ತಿಳಿಸಿದರು. ಹಾಗೂ 2 ಕೊಠಡಿಗಳನ್ನು ಡ್ರಾಪ್ ಮಾಡುವುದಾಗಿ ತಿಳಿಸಿದರು.

ಆರ್‌ಐಡಿಎಫ್–13ರಡಿ ರಾಮನಗರ 3 ಲಿಂಟಲ್ ನಾಲ್ಕು ಛಾವಣಿ ಹಂತದಲ್ಲಿದ್ದು, ಏಪ್ರಿಲ್ 2012 ರೊಳಗೆ ಪೂರ್ಣಗಳಿಸುವುದಾಗಿ ಉಪನಿರ್ದೇಶಕರು ತಿಳಿಸಿದರು.

ಕೋಲಾರಕ್ಕೆ ಸಂಬಂಧಿಸಿದ 12 ಪ್ರಾಜೆಕ್ಟಗಳ ಕೊಠಡಿಗಳ ಕಾಮಗಾರಿಯನ್ನು ದಿ: 02.03.2012ರಂದು ನಿರ್ಮಿತಿ ಕೇಂದ್ರಕ್ಕೆ ನೀಡಿರುವುದನ್ನು ಉಪನಿರ್ದೇಶಕರು ತಿಳಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಸಿಇಓ ರವರು ಹಾಜರಿದ್ದುದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಮಾನ್ಯ ಆಯುಕ್ತರು, ಇವರುಗಳಿಗೆ ತಿಳಿಸಿದರು.

ಮಧುಗಿರಿ ಜಿಲ್ಲೆಯಲ್ಲಿ 8 ಕೊಠಡಿಗಳು ಅಂತಿಮ ಹಂತದಲ್ಲಿದ್ದು, ಇವುಗಳನ್ನು ಏಪ್ರಿಲ್ ಅಂತ್ಯಕ್ಕೆ ಪೂರ್ಣಗೊಳಿಸುವುದಾಗಿ ತಿಳಿಸಿದರು. ಮೂರು ಕೊಠಡಿಗಳು ಇನ್ನೂ ಪ್ರಾರಂಭವಾಗಬೇಕಾಗಿದ್ದು ಈ ಬಗ್ಗೆ ನೋಡಲ್ ಅಧಿಕಾರಿಗಳು ಪರಿಶೀಲಿಸಿ, ಸಿಇಓ ರವರೊಂದಿಗೆ ಚರ್ಚಿಸಿ ಸಮಸ್ಯೆ ಬಗೆಹರಿಸಬೇಕಾಗಿ ಮಾನ್ಯ ಆಯುಕ್ತರು ತಿಳಿಸಿದರು.

ಹಾಸನ ಎಲ್ಲಾ 18 ಕೊಠಡಿಗಳ ಕಾಮಗಾರಿ ಪ್ರಾರಂಭವಾಗಿರುವುದಾಗಿ ತಿಳಿಸಿದರು. ಚಿಕ್ಕಮಗಳೂರು ಎಲ್ಲಾ ಪ್ರಾಜೆಕ್ಟ್‌ಗಳು ಪ್ರಾರಂಭವಾಗಿರವುದಾಗಿ ಉಪನಿರ್ದೇಶಕರುಗಳು ತಿಳಿಸಿದರು.

ರಾಮನಗರ 2 ಕೊಠಡಿಗಳ ಕಾಮಗಾರಿಗಳನ್ನು ಮಾರ್ಚ್–2012 ಮಾಹೆಯೊಳಗೆ ಪೂರ್ಣಗೊಳಿಸಲು ತಿಳಿಸಿದರು. ಕೋಲಾರ – 01, ತುಮಕೂರು – 02, ಚಿತ್ರದುರ್ಗ – 03 ಮಧುಗಿರಿ – 01, ಶಿವಮೊಗ್ಗ – 04, ಉಡುಪಿ – 01, ಪ್ರಾರಂಭಿಸದೇ ಇರುವ ಕಾಮಗಾರಿಗಳನ್ನು ಕೈಬಿಡಲು ನಿರ್ಧರಿಸಲಾಯಿತು.

**ಬೆಂಗಳೂರು ಉತ್ತರ ಜಿಲ್ಲೆಗೆ ಮಂಜೂರಾಗಿರುವ ಹೆಚ್ಚುವರಿ 11 ಶಾಲಾ ಕೊಠಡಿ ಕಾಮಗಾರಿಯನ್ನು ಈಗಾಗಲೇ ವಿಭಜಿಸಿ ಈಗಾಗಲೇ ರಾಜ್ಯ ಕಛೇರಿಯಿಂದ ನೀಡಿರುವ ನಿರ್ದೇಶನದಂತೆ ನಾಳೆಯಿಂದಲೇ ಶಾಲಾ ಎಸ್.ಡಿ.ಎಂ.ಸಿ. ವತಿಯಿಂದ ಪ್ರಾರಂಭಿಸಲು ಉಪನಿರ್ದೇಶಕರ ಕೋರಿಕೆಯಂತೆ ಅನುಮತಿ ನೀಡಲಾಯಿತು.**

ಕೋಲಾರ ಜಿಲ್ಲೆಗೆ ಸಂಭಂದಿಸಿದಂತೆ ಬಾಕಿ ಇರುವ ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮ ವಹಿಸುವಂತೆ ಸಭೆಗೆ ಹಾಜರಿದ್ದ ಜಿಲ್ಲಾಧಿಕಾರಿಗಳು, ಕೋಲಾರ, ರವರನ್ನು ಕೋರಲಾಯಿತು. ಹಾಗೂ ಕುಡಿಯುವ ನೀರು ಮತ್ತು ಶೌಚಾಲಯಗಳ ಕುರಿತು ಶ್ವೇತ ಪತ್ರ ಹೊರಡಿಸುವ ಕುರಿತು ಕ್ರಮವಹಿಸಲು ಕೋರಲಾಯಿತು.

ಜಿಲ್ಲಾವಾರು ಆರ್‌ಐಡಿಎಫ್–12 ರಿಂದ 16ರವರೆಗಿನ ಪ್ರಗತಿ
ವಿವರ

## ಆರ್.ಐ.ಡಿ.ಎಫ್.–12ರ ಭೌತಿಕ ಪ್ರಗತಿ

| ಕ್ರ.ಸಂ. | ಜಿಲ್ಲೆಯ ಹೆಸರು | ಒಟ್ಟು ಪ್ರಾಜೆಕ್ಟ್ | ಒಟ್ಟು ಕೊಠಡಿಗಳು | ಪಾಯ | ಫ್ಲಿಂತ್ | ಲಿಂಟಲ್ | ಛಾವಣಿ | ಅಂತಿಮ | ಪೂರ್ಣ | Dropped Rooms | Dropped Projects | ಪ್ರಾರಂಭಿಸ ಬೇಕಾದ ಕೊಠಡಿಗಳು |
|---|---|---|---|---|---|---|---|---|---|---|---|---|
| 1 | ಬೆಂಗಳೂರು ಉತ್ತರ | 1 | 5 | 0 | 0 | 0 | 0 | 0 | 5 | 0 | 0 | 0 |
| 2 | ಬೆಂಗಳೂರು ದಕ್ಷಿಣ | 12 | 20 | 0 | 0 | 0 | 0 | 0 | 15 | 5 | 1 | 0 |
| 3 | ಬೆಂಗಳೂರು ಗ್ರಾ. | 12 | 28 | 0 | 0 | 0 | 0 | 0 | 28 | 0 | 0 | 0 |
| 4 | ರಾಮನಗರ | 30 | 109 | 0 | 0 | 0 | 0 | 0 | 109 | 0 | 0 | 0 |
| 5 | ಕೋಲಾರ | 16 | 48 | 0 | 0 | 0 | 0 | 0 | 48 | 0 | 0 | 0 |
| 6 | ಚಿಕ್ಕಬಳ್ಳಾಪುರ | 23 | 55 | 0 | 0 | 0 | 0 | 0 | 55 | 0 | 0 | 0 |
| 7 | ತುಮಕೂರು | 41 | 99 | 2 | 0 | 0 | 0 | 0 | 95 | 2 | 1 | 0 |
| 8 | ಮಧುಗಿರಿ | 24 | 68 | 0 | 0 | 0 | 0 | 7 | 61 | 0 | 0 | 0 |
| 9 | ಚಿತ್ರದುರ್ಗ | 11 | 37 | 0 | 5 | 0 | 0 | 0 | 32 | 0 | 0 | 0 |
| 10 | ದಾವಣಗೆರೆ | 30 | 81 | 0 | 0 | 0 | 0 | 0 | 81 | 0 | 0 | 0 |
| 11 | ಶಿವಮೊಗ್ಗ | 48 | 90 | 0 | 0 | 0 | 0 | 0 | 90 | 0 | 0 | 0 |
| 12 | ಮೈಸೂರು | 37 | 130 | 0 | 0 | 0 | 0 | 0 | 125 | 0 | | 5 |
| 13 | ಚಾಮರಾಜನಗರ | 22 | 58 | 0 | 0 | 0 | 0 | 0 | 48 | 10 | 2 | 0 |
| 14 | ಮಂಡ್ಯ | 59 | 188 | 0 | 0 | 12 | 15 | 0 | 156 | 0 | 0 | 5 |
| 15 | ಹಾಸನ | 76 | 206 | 0 | 0 | 0 | 0 | 0 | 203 | 3 | 1 | 0 |
| 16 | ಚಿಕ್ಕಮಗಳೂರು | 29 | 70 | 0 | 0 | 0 | 0 | 0 | 56 | 14 | 5 | 0 |
| 17 | ಕೊಡಗು | 15 | 31 | 0 | 0 | 1 | 0 | 0 | 22 | 8 | 4 | 0 |
| 18 | ದಕ್ಷಿಣ ಕನ್ನಡ | 39 | 98 | 0 | 0 | 0 | 0 | 2 | 86 | 10 | 2 | 0 |
| 19 | ಉಡುಪಿ | 12 | 30 | 0 | 0 | 0 | 0 | 0 | 30 | 0 | 0 | 0 |

## ಆರ್.ಐ.ಡಿ.ಎಫ್.–13ರ ಭೌತಿಕ ಪ್ರಗತಿ

| ಕ್ರ.ಸಂ. | ಜಿಲ್ಲೆಯ ಹೆಸರು | ಒಟ್ಟು ಪ್ರಾಜೆಕ್ಟ್ | ಒಟ್ಟು ಕೊಠಡಿ | ಪಾಯ | ಫ್ಲಿಂತ್ | ಲಿಂಟಲ್ | ಛಾವಣಿ | ಅಂತಿಮ | ಪೂರ್ಣ | Dropped Rooms | Dropped Projects | ಪ್ರಾರಂಭಿಸ ಬೇಕಾದ ಕೊಠಡಿಗಳು | ಪ್ರಾರಂಭಿಸ ಬೇಕಾದ ಪ್ರಾಜೆಕ್ಟ್‌ಗಳು |
|---|---|---|---|---|---|---|---|---|---|---|---|---|---|
| 1 | ಬೆಂಗಳೂರು ಉತ್ತರ | 2 | 6 | 0 | 0 | 0 | 0 | 0 | 6 | 0 | 0 | 0 | 0 |
| 2 | ಬೆಂಗಳೂರು ದಕ್ಷಿಣ | 4 | 10 | 0 | 0 | 0 | 0 | 0 | 9 | 1 | 1 | 0 | 0 |
| 3 | ಬೆಂಗಳೂರು ಗ್ರಾ. | 16 | 42 | 0 | 0 | 0 | 10 | 22 | 10 | 0 | 0 | 0 | 0 |
| 4 | ರಾಮನಗರ | 30 | 75 | 2 | 0 | 0 | 0 | 0 | 71 | 2 | 2 | 0 | 0 |
| 5 | ಕೋಲಾರ | 29 | 66 | 0 | 0 | 0 | 5 | 11 | 49 | 1 | 1 | 1 | 0 |
| 6 | ಚಿಕ್ಕಬಳ್ಳಾಪುರ | 16 | 29 | 0 | 0 | 0 | 0 | 0 | 29 | 0 | 0 | 0 | 0 |
| 7 | ತುಮಕೂರು | 40 | 81 | 0 | 0 | 0 | 0 | 0 | 79 | 0 | 0 | 2 | 1 |
| 8 | ಮಧುಗಿರಿ | 29 | 59 | 4 | 0 | 4 | 8 | 0 | 42 | 1 | 1 | 0 | 0 |
| 9 | ಚಿತ್ರದುರ್ಗ | 26 | 68 | 1 | 0 | 0 | 0 | 0 | 64 | 0 | 0 | 3 | 1 |
| 10 | ದಾವಣಗೆರೆ | 26 | 49 | 0 | 3 | 3 | 3 | 3 | 37 | 0 | 0 | 0 | 0 |
| 11 | ಶಿವಮೊಗ್ಗ | 26 | 56 | 2 | 0 | 0 | 0 | 3 | 43 | 4 | 1 | 4 | 1 |
| 12 | ಮೈಸೂರು | 38 | 104 | 2 | 2 | 2 | 6 | 2 | 82 | 8 | 2 | 0 | 0 |
| 13 | ಚಾಮರಾಜನಗರ | 20 | 59 | 6 | 0 | 2 | 2 | 10 | 39 | 0 | 0 | 0 | 0 |
| 14 | ಮಂಡ್ಯ | 65 | 159 | 0 | 8 | 7 | 12 | 6 | 112 | 12 | 3 | 2 | 1 |
| 15 | ಹಾಸನ | 111 | 234 | 4 | 1 | 6 | 16 | 49 | 150 | 8 | 2 | 0 | 0 |
| 16 | ಚಿಕ್ಕಮಗಳೂರು | 30 | 69 | 0 | 0 | 0 | 6 | 7 | 35 | 14 | 5 | 7 | 2 |
| 17 | ಕೊಡಗು | 14 | 39 | 0 | 0 | 2 | 5 | 8 | 24 | 0 | 0 | 0 | 0 |
| 18 | ದಕ್ಷಿಣ ಕನ್ನಡ | 48 | 88 | 0 | 0 | 4 | 26 | 22 | 16 | 14 | 9 | 6 | 2 |
| 19 | ಉಡುಪಿ | 19 | 39 | 0 | 0 | 0 | 0 | 10 | 27 | 0 | 0 | 2 | 1 |

# ಅಜೆಂಡಾ-13

## ಆರ್.ಐ.ಡಿ.ಎಫ್.-14 ರ ಬೌತಿಕ ಪ್ರಗತಿ **08.03.2012** ರಂತೆ ನಮೂದಿಸುವುದು.

| ಕ್ರ.ಸಂ. | ಜಿಲ್ಲೆಯ ಹೆಸರು | ಒಟ್ಟು ಪ್ರಾಜೆಕ್ಟ್ | ಒಟ್ಟು ಕೊಠಡಿಗಳು | ಪಾಯ | ಪ್ಲಿಂತ್ | ಿಂಟಲ್ | ಛಾವಣಿ | ಅಂತಿಮ | ಪೂರ್ಣ | Dropped Rooms | Dropped Projects | ಪ್ರಾರಂಭಿಸ ೇಕಾದ ಕೊಠಡಿಗಳು | ಪ್ರಾರಂಭಿಸ ೇಕಾದ ಪ್ರಾಜೆಕ್ಟ್ |
|---|---|---|---|---|---|---|---|---|---|---|---|---|---|
| 1 | ಿಂಗಳೂರು ಉತ್ತರ | 2 | 5 | | | | | | 5 | | | | |
| 2 | ಿಂಗಳೂರು ದಕ್ಷಿಣ | 4 | 14 | - | - | - | - | - | 14 | 0 | 0 | 0 | 0 |
| 3 | ಿಂಗಳೂರು ಗ್ರಾ. | 11 | 36 | 0 | 0 | 0 | 0 | | 36 | ಎಲ್ಲಾ ಪೂರ್ಣಗೊಂಡಿದ್ದು 50 ರಷ್ಟು ಕೊಠಡಿಗಳಿಗೆ ಸುಣ್ಣ ಮತ್ತು ವಿದ್ಯುತ್ ಸಂಪರ್ಕ ¨ ಕಿ ಇದೆ. | | | |
| 4 | ರಾಮನಗರ | 5 | 18 | - | - | 03 | 04 | - | 11 | - | - | - | - |
| 5 | ಕೋಲಾರ | **12** | **43** | ನಿರ್ಮಿತಿ ಕೇಂದ್ರ ಕೋಲಾರ ರವರಿಗೆ ಏಜೆನ್ಸಿ ನಿಗಧಿಪಡಿಸಿ ದಿನಾಂಕ:02–03–2012 ರಂದು ಮುಖ್ಯನಿರ್ವಹಣಾಧಿಕಾರಿಗಳು ಜಿಲ್ಲಾಪಂಚಾಯತ್ ಕೋಲಾರ ರವರು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. | | | | | | | | | |
| 6 | ಚಿಕ್ಕ§ಳ್ಳಾಪುರ | 6 | 23 | 0 | 0 | 0 | 0 | 0 | 23 | 0 | 0 | 0 | 0 |
| 7 | ತುಮಕೂರು | 12 | 32 | - | - | - | - | - | 32 | - | - | - | - |
| 8 | ಮಧುಗಿರಿ | 9 | 31 | - | - | - | - | 8 | 20 | - | - | 3 | 1 |
| 9 | ಚಿತ್ರದುರ್ಗ | 10 | 30 | | | | | | 26 | | | 04 | 01 |
| 10 | ದಾವಣಗೆರೆ | 11 | 40 | | | | | | 3/ | | | | |
| 11 | ಶಿವಮೊಗ್ಗ | 62 | 146 | 01 | 0 | 0 | 02 | 0 | 131 | 0 | 0 | 12 | 3 |

# ಅಜೆಂಡಾ-13

## ಆರ್.ಐ.ಡಿ.ಎಫ್.-14 ರ ಬೌತಿಕ ಪ್ರಗತಿ **08.03.2012** ರಂತೆ ನಮೂದಿಸುವುದು.

| ಕ್ರ.ಸಂ. | ಜಿಲ್ಲೆಯ ಹೆಸರು | ಒಟ್ಟು ಪ್ರಾಜೆಕ್ಟ್ | ಒಟ್ಟು ಕೊಠಡಿಗಳು | ಪಾಯ | ಪ್ಲಿಂತ್ | ಲಿಂಟಲ್ | ಛಾವಣಿ | ಅಂತಿವ ೨ | ಪೂಣ ್ | Dropped Rooms | Dropped Projects | ಪ್ರಾರಂಭಿಸ ಬೇಕಾದ ಕೊಠಡಿಗಳು | ಪ್ರಾರಂಭಿಸ ಬೇಕಾದ ಪ್ರಾಜೆಕ್ಟ್ |
|---|---|---|---|---|---|---|---|---|---|---|---|---|---|
| 12 | ಮೈಸೂರು | 6 | 24 | | | | | | | | | | 6 |
| 13 | ಚಾಮರಾಜನಗರ | 10 | 27 | 01 | – | – | 11 | 04 | 01 | 00 | 00 | 10 | 03 |
| 14 | ಮಂಡ್ಯ | 6 | 22 | | | | 4 | | 18 | | | | |
| 15 | ಹಾಸನ | 6 | 18 | 3 | | | | | 3 | | | 12 | 4 |
| 16 | ಚಿಕ್ಕಮಗಳೂರು | 12 | 31 | 2 | 0 | 0 | 0 | 4 | 19 | 0 | 0 | 6 | 3 |
| 17 | ಕೊಡಗು | 2 | 6 | | | | | 03 | 03 | | | | |
| 18 | ದಕ್ಷಿಣ ಕನ್ನಡ | 8 | 32 | 0 | 0 | 0 | 4 | 12 | 12 | | | 4 | 1 |
| 19 | ಉಡುಪಿ | 5 | 18 | - | - | 2 | - | 4 | 12 | - | - | - | - |

ಅಜೆಂಡಾ-14

## ಆರ್.ಐ.ಡಿ.ಎಫ್.-15 ರ ಬೌತಿಕ ಪ್ರಗತಿ **08.03.2012** ರಂತೆ ನಮೂದಿಸುವುದು.

| ಕ್ರ.ಸಂ. | ಜಿಲ್ಲೆಯ ಹೆಸರು | ಒಟ್ಟು ಪ್ರಾಜೆಕ್ಟ್ | ಒಟ್ಟು ಕೊಠಡಿಗಳು | ಪಾಯ | ಫ್ಲಿಂತ್ | ಲಿಂಟಲ್ | ಛಾವಣಿ | ಅಂತಿಮ | ಪೂರ್ಣ | ಕೈಬಿಡಲಾದ ಪ್ರಾಜೆಕ್ಟ್ ಸಂಖ್ಯೆ | ಪ್ರಾರಂಭಿಸಬೇಕಾದ ಕೊಠಡಿಗಳು | ಪ್ರಾರಂಭಿಸಬೇಕಾದ ಪ್ರಾಜೆಕ್ಟ್ |
|---|---|---|---|---|---|---|---|---|---|---|---|---|
| 7 | ಮೈಸೂರು | 1 | 5 | | | | | | | | | |
| 8 | ಚಾಮರಾಜನಗರ | 2 | 10 | – | – | – | – | 05 | – | 0 | 05 | 01 |
| 9 | ಮಂಡ್ಯ | 2 | 10 | **5** | | | | **5** | | | | |
| 10 | ಹಾಸನ | 1 | 5 | | | | | | | | 5 | 1 |
| 11 | ಚಿಕ್ಕಮಗಳೂರು | 1 | 5 | 0 | 0 | 5 | 0 | 0 | 0 | 0 | 0 | 0 |
| 12 | ದಕ್ಷಿಣ ಕನ್ನಡ | 2 | 10 | 0 | 0 | 5 | 2 | 0 | 3 | 0 | 0 | 0 |
| 13 | ಉಡುಪಿ | 1 | 5 | - | - | - | - | - | 5 | - | - | - |

ಅಜೆಂಡಾ-15

## ಆರ್.ಐ.ಡಿ.ಎಫ್.-16ರ ಬೌತಿಕ ಪ್ರಗತಿ **08.03.2012** ರಂತೆ ನಮೂದಿಸುವುದು.

| ಕ್ರ.ಸಂ. | ಜಿಲ್ಲೆಯ ಹೆಸರು | ಒಟ್ಟು ಪ್ರಾಜೆಕ್ಟ್ | ಒಟ್ಟು ಕೊಠಡಿಗಳು | ಪಾಯ | ಫ್ಲಿಂತ್ | ಂಟಲ್ | ಛಾವಣಿ | ಅಂತಿಮ | ಪೂರ್ಣ | Dropped Rooms | ಪ್ರಾರಂಭಿಸ ೀಕಾದ ಕೊಠಡಿಗಳು | ಪ್ರಾರಂಬಿಸ ೀಕಾದ ಪ್ರಾಜೆಕ್ಟ್ |
|---|---|---|---|---|---|---|---|---|---|---|---|---|
| 1 | ಂಗಳೂರು ಉತ್ತರ | 1 | 2 | 2 | | | | | | | | |
| 2 | ಂಗಳೂರು ಗ್ರಾ. | 2 | 3 | ಆರ್.ಐ.ಡಿ.ಎಫ್16 ರಡಿ ಮಂಜೂರಾದ ಕೊಠಡಿಗಳನ್ನು ಕೈಬಿಡಲು ಕೋರಿ ಆಯುಕ್ತರಿಗೆ ಪತ್ರ ರೆಯಲಾಗಿದೆ (ಪ್ರತಿ ಲಗತ್ತಿಸಿದೆ) | | | | | | | | |
| 3 | ರಾಮನಗರ | 1 | 4 | – | 04 | – | – | – | – | – | - | - |
| 4 | ಕೋಲಾರ | **1** | **5** | ನಿರ್ಮಿತಿ ಕೇಂದ್ರ ಕೋಲಾರ ರವರಿಗೆ ಏಜೆನ್ಸಿ ನಿಗಧಿಪಡಿಸಿ ದಿನಾಂಕ:02–03–2012 ರಂದು ಮುಖ್ಯನಿರ್ವಹಣಾಧಿಕಾರಿಗಳು ಜಿಲ್ಲಾಪಂಚಾಯತ್ ಕೋಲಾರ ರವರು ಆಡಳಿತಾತ್ಮಕ ಅನುಮೋದನೆ ನೀಡಿರುತ್ತಾರೆ. | | | | | | | | |
| 5 | ತುಮಕೂರು | 1 | 5 | – | – | – | – | – | 5 | – | - | - |
| 6 | ಮಧುಗಿರಿ | 1 | 5 | 0 | 0 | 0 | 0 | 5 | 0 | 0 | 0 | 0 |
| 7 | ಶಿವಮೊಗ್ಗ | 1 | 5 | 0 | 0 | 0 | 0 | 0 | 0 | 0 | 5 | 1 |

ಅಜೆಂಡಾ-15

## ಆರ್.ಐ.ಡಿ.ಎಫ್.-16ರ ಬೌತಿಕ ಪ್ರಗತಿ **08.03.2012** ರಂತೆ ನಮೂದಿಸುವುದು.

| ಕ್ರ.ಸಂ. | ಜಿಲ್ಲೆಯ ಹೆಸರು | ಒಟ್ಟು ಪ್ರಾಜೆಕ್ಟ್ | ಒಟ್ಟು ಕೊಠಡಿಗಳು | ಪಾಯ | ಪ್ಲಿಂತ್ | ಲಿಂಟಲ್ | ಛಾವಣಿ | ಅಂತಿಮ | ಪೂರ್ಣ | Dropped Rooms | ಪ್ರಾರಂಭಿಸ ಬೇಕಾದ ಕೊಠಡಿಗಳು | ಪ್ರಾರಂಬಿಸ ಬೇಕಾದ ಪ್ರಾಜೆಕ್ಟ್ |
|---|---|---|---|---|---|---|---|---|---|---|---|---|
| 8 | ಮೈಸೂರು | 1 | 4 | | | | | | | | | 1 |
| 9 | ಚಾಮರಾಜನಗರ | 2 | 9 | 0 | 0 | 0 | 0 | 04 | 05 | 0 | 0 | 0 |
| 10 | ಮಂಡ್ಯ | **4** | **18** | **5** | | | **4** | | **5** | | 4 | 1 |
| 11 | ಹಾಸನ | 1 | 5 | | | | | | | | 5 | 1 |
| 12 | ದಕ್ಷಿಣ ಕನ್ನಡ | 9 | 20 | 13 | 0 | 1 | 1 | 0 | | | 5 | 1 |
| 13 | ಉಡುಪಿ | 4 | 12 | – | – | – | – | – | – | – | 12 | 4 |

ಅಜೆಂಡಾ-16

## ಆರ್.ಐ.ಡಿ.ಎಫ್.-16ರ( ನೆರೆ ಪೀಡೀತ ಪ್ರದೇಶಗಳ ಸರ್ಕಾರಿ ಪ್ರೌಢಶಾಲೆಗಳ ಕೊಠಡಿ ನಿರ್ಮಾಣ)ಬೌತಿಕ ಪ್ರಗತಿ **08.03.2012** ರಂತೆ ನಮೂದಿಸುವುದು.

| **ಕ್ರ.ಸಂ.** | ಜಿಲ್ಲೆಯ ಹೆಸರು | ಒಟ್ಟು ಪ್ರಾಜೆಕ್ಟ್ | ಒಟ್ಟು ಕೊಠಡಿಗಳು | ಪಾಯ | ಪ್ಲಿಂತ್ | ಲಿಂಟಲ್ | ಛಾವಣಿ | ಅಂತಿಮ | ಪೂರ್ಣ | Dropped Rooms | ಪ್ರಾರಂಭಿಸ ಬೇಕಾದ ಕೊಠಡಿಗಳು | ಪ್ರಾರಂಬಿಸ ಬೇಕಾದ ಪ್ರಾಜೆಕ್ಟ್ |
|---|---|---|---|---|---|---|---|---|---|---|---|---|
| 1 | ದಾವಣಗೆರೆ | 18 | 63 | | | | | 14 | 27 | | | |

**2010–11ನೇ ಸಾಲಿನ ಕರ್ನಾಟಕ ಕೆಜಿಬಿವಿ ವಸತಿ ನಿಲಯಗಳ ಕಾಮಗಾರಿ:–**

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ ಇಲ್ಲಿನ ತಾಂತ್ರಿಕ ವ್ಯವಸ್ಥಾಪಕರಾದ ಶ್ರೀ.ವಾಸುದೇವ್ ರವರ ಸಮ್ಮುಖದಲ್ಲಿ ಜಿಲ್ಲೆಗಳಿಂದ ಬಂದ ನಿರ್ಮಿತಿ ಕೇಂದ್ರದ ಇಂಜಿನಿಯರ್‌ಗಳೊಂದಿಗೆ ಕಾಮಗಾರಿಗಳ ಪ್ರಗತಿ ಪರಿಶೀಲನೆಯನ್ನು ಮಾಡಲಾಯಿತು.

ಮಧುಗಿರಿ, ಕೆಂಪಾಪುರ ಪಾಯ ಹಂತದಲ್ಲಿದ್ದು, ಆಗಸ್ಟ್ 2012ರೊಳಗೆ ಪೂರ್ಣಗೊಳಿಸಲು ಇಂಜಿನಿಯರ್‌ರವರು ತಿಳಿಸಿದರು. ಪಾವಗಡ, ರಂಗಸಮುದ್ರ ವಸತಿ ನಿಲಯ ಮುಕ್ತಾಯ ಹಂತದಲ್ಲಿದ್ದು, ಏಪ್ರಿಲ್ ಅಂತ್ಯಕ್ಕೆ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ತಿಳಿಸಿದರು. ಶಿರಾ ತಾಲ್ಲೂಕು, ಚಿಕ್ಕನಹಳ್ಳಿ ವಸತಿ ನಿಲಯ ಒಂದನೇ ಮಹಡಿ ಛಾವಣಿ ಮಟ್ಟದಲ್ಲಿದ್ದು, ಜೂನ್ 2012ರೊಳಗೆ ಮುಕ್ತಾಯಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

ತುಮಕೂರು ಜಿಲ್ಲೆ ಗುಬ್ಬಿ ಅಮ್ಮನಘಟ್ಟ 1ನೇ ಅಂತಸ್ತು, ಮೇಲ್ಚಾವಣಿ ಹಂತದಲ್ಲಿದ್ದು, ಜೂನ್ 2012ರೊಳಗೆ ಪೂರ್ಣಗೊಳಿಸುವುದಾಗಿ ಕುಣಿಗಲ್ ತಾಲ್ಲೂಕು, ದೊಡ್ಡಮಧುರೆ ಛಾವಣಿ ಹಂತದಲ್ಲಿದ್ದು, ಜುಲೈ 2012 ಅಂತ್ಯದೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ಸಭೆಗೆ ತಿಳಿಸಿದರು.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು, ಚಿಕ್ಕಸಂದ್ರ ಮುಕ್ತಾಯವಾಗಿದ್ದು, ಹಸ್ತಾಂತರಿಸುವುದಾಗಿ ತಿಳಿಸಿದರು. ಕನಕಪುರ ತಾಲ್ಲೂಕು, ಕರಡಿಗುಡ್ಡದ ಗೋಮಾಳ, ಮೊದಲನೇ ಮಹಡಿ ಛಾವಣಿ ಹಂತದಲ್ಲಿದ್ದು, ದಿ: 31.03.2012ರೊಳಗೆ ಪೂರ್ಣಗೊಳಿಸುವುದಾಗಿ ತಿಳಿಸಿದರು.

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲ್ಲೂಕು, ಸ.ಹಿ.ಪ್ರಾ.ಶಾಲೆ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಕೆಕೆಜಿಬಿವಿ ಛಾವಣಿ ಹಂತದಲ್ಲಿ ಮೇ 2012ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ಸಭೆಗೆ ತಿಳಿಸಿದರು.

ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ತಾಲ್ಲೂಕು ಅಚಗಾನಪಲ್ಲಿ ಕೆಕೆಜಿಬಿವಿ ವಸತಿ ನಿಲಯವನ್ನು ಇಲಾಖೆಗೆ ಹಸ್ತಾಂತರಿಸಿರುವುದಾಗಿ ತಿಳಿಸಿದರು.

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು, ಹಿರೇಮಳಲಿ[ನಲ್ಲೂರು] ಲಿಂಟಲ್ ಹಂತದಲ್ಲಿದ್ದು, ಹರಪನಹಳ್ಳಿ ತಾಲ್ಲೂಕು, ಹರಪನಹಳ್ಳಿ ಕೆಕೆಜಿಬಿವಿ ಲಿಂಟಲ್ ಮಟ್ಟದಲ್ಲಿದ್ದು, ದಿ: 31.05.2012ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ಸಭೆಗೆ ತಿಳಿಸಿದರು.

ಮೈಸೂರು ಜಿಲ್ಲೆ ಹೆಚ್‌ಡಿ ಕೋಟೆ, ಬೀಚನಹಳ್ಳಿ, ಕೆಕೆಜಿಬಿವಿ ವಸತಿ ನಿಲಯ ಛಾವಣಿ ಹಂತದಲ್ಲಿದ್ದು, ಏಪ್ರಿಲ್ 2012ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್ ಸಭೆಗೆ ತಿಳಿಸಿದರು.

ಚಾಮರಾಜನಗರ ಜಿಲ್ಲೆ ಚಂದಕವಾಡಿ ಕೆಕೆಜಿಬಿವಿ ವಸತಿ ನಿಲಯ ಪೂರ್ಣಗೊಳಿಸಿ ಇಲಾಖೆಗೆ ಹಸ್ತಾಂತರಿಸಿರುವುದಾಗಿ ಇಂಜಿನಿಯರ್‌ರವರು ಸಭೆಗೆ ತಿಳಿಸಿದರು.

**2011–12ನೇ ಸಾಲಿನ ಕೆಕೆಜಿಬಿವಿ ವಸತಿ ನಿಲಯ:–**

ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿಬಿದನೂರು ತಾಲ್ಲೂಕು, ಅಲ್ಲಾಕಪುರ ಕೆಕೆಜಿಬಿವಿ ಫ್ಲಿಂತ್ ಮಟ್ಟದಲ್ಲಿದ್ದು ದಿ: 31.07.2012 ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

ದಾವಣಗೆರೆ ಜಿಲ್ಲೆ, ಹೊನ್ನಾಳಿ ತಾಲ್ಲೂಕು, ಕುಂದೂರು ಕೆಕೆಜಿಬಿವಿ ಫ್ಲಿಂತ್ ಮಟ್ಟದಲ್ಲಿದ್ದು, ದಿ: 31.07.2012 ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

ಜಗಳೂರು ತಾಲ್ಲೂಕು, ಸೊಕ್ಕೆ ಕೆಕೆಜಿಬಿವಿ ಪಾಯ ಹಂತದಲ್ಲಿದ್ದು, ದಿ: 31.07.2012 ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

ತುಮಕೂರು ಜಿಲ್ಲೆ, ತುರುವೇಕೆರೆ ತಾಲ್ಲೂಕು ದಬ್ಬೆಘಟ್ಟ, ಕೆಕೆಜಿಬಿವಿ ಪಾಯ ಹಂತದಲ್ಲಿದ್ದು, ದಿ: 31.08.2012 ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

ಮಧುಗಿರಿ ಜಿಲ್ಲೆ ಕೊರಟಗೆರೆ ತಾಲ್ಲೂಕು, ಅಕ್ಕಿರಾಂಪುರ ಕೆಕೆಜಿಬಿವಿ ಪಾಯ ಹಂತದಲ್ಲಿದ್ದು, ದಿ: 31.08.2012 ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು, ಹರಿಶ್ಚಂದ್ರ ಘಾಟ್, ಕೆಕೆಜಿಬಿವಿ ಪಾಯ ಹಂತದಲ್ಲಿದ್ದು, ದಿ: 31.08.2012 ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು, ಕೆಕೆಜಿಬಿವಿ ಫ್ಲಿಂತ್ ಹಂತದಲ್ಲಿದ್ದು, ದಿ: 30.06.2012 ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕು ನಿಟ್ಟೆ ಕೆಕೆಜಿಬಿವಿ ಪಾಯ ಹಂತದಲ್ಲಿದ್ದು, ದಿ: 31.08.2012 ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಸಿಂಗನಲ್ಲೂರು ಕೆಕೆಜಿಬಿವಿ ಪಾಯ ಹಂತದಲ್ಲಿದ್ದು, ದಿ: 31.08.2012 ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕು, ಲಿಂಗ್ಲಾಪುರ ಕೆಕೆಜಿಬಿವಿ ನಿವೇಶನ ಹಸ್ತಾಂತರವಾಗಿದ್ದು, ಕಾಮಗಾರಿ ಪ್ರಾರಂಭಿಸಿ ದಿ: 31.08.2012 ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು, ಹುಲಿಕಲ್ ಕೆಕೆಜಿಬಿವಿ ನಿವೇಶನ ಹಸ್ತಾಂತರವಾಗಿದ್ದು, ಕಾಮಗಾರಿ ಪ್ರಾರಂಭಿಸಿ ದಿ: 31.08.2012 ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

**ಶಿಕ್ಷಕರ ವಸತಿ ಗೃಹ ಪ್ರಗತಿ ಪರಿಶೀಲನೆ–ಮೊದಲನೇ ಹಂತ–2007–08:–**

ಹಿಂದಿನ ಕೋಲಾರ ಜಿಲ್ಲೆ ಗುಡಿಬಂಡೆ ತಾಲ್ಲೂಕು, ಬೀಚಗಾನಹಳ್ಳಿ, ಶಿಕ್ಷಕರ ವಸತಿ ಗೃಹ ಪೂರ್ಣಗೊಂಡು ಹಸ್ತಾಂತರವಾಗಿ ಶಿಕ್ಷಕರು ಎರಡು ವರ್ಷಗಳಿಂದ ವಾಸವಾಗಿರುತ್ತಾರೆ.

ಚಿತ್ರದುರ್ಗ ಜಿಲ್ಲೆ, ಮೊಳಕಾಲ್ಮೂರು ತಾಲ್ಲೂಕು, ಬಿ.ಜಿ.ಕೆರೆ, ಕೊಂಡ್ಲಹಳ್ಳಿ, ರಾಂಪುರ ಪೂರ್ಣಗೊಂಡಿದ್ದು, ಇಲಾಖೆಗೆ ಹಸ್ತಾಂತರಿಸಿದೆ. ಶಿಕ್ಷಕರು ವಾಸವಿರುವುದಾಗಿ ಉಪನಿರ್ದೇಶಕರು ತಿಳಿಸಿದರು.

ಮೈಸೂರು ಜಿಲ್ಲೆ, ಹೆಚ್.ಡಿ.ಕೋಟೆ, ಅಂತರಸಂತೆ, ಬಿ.ಮಟಗೆರೆ, ಮಾದಾಪುರ ಶಿಕ್ಷಕರ ವಸತಿ ಗೃಹ ಪೂರ್ಣಗೊಂಡಿದ್ದು, ಇಲಾಖೆಗೆ ಹಸ್ತಾಂತರಿಸಲಾಗಿದೆ ಎಂದು ಉಪನಿರ್ದೇಶಕರು ತಿಳಿಸಿದರು. ಮಾದಾಪುರದಲ್ಲಿ ಶಿಕ್ಷಕರು ವಾಸವಾಗಿರುವುದಾಗಿ ತಿಳಿಸಿದರು.

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಅಂಗಳ ಮತ್ತು ಬೇಗೂರು ಪೂರ್ಣಗೊಂಡು ಇಲಾಖೆಗೆ ಹಸ್ತಾಂತರವಾಗಿದ್ದು, ಶಿಕ್ಷಕರಿಗೆ ಕೂಡಲೇ ಹಂಚಲು ಮಾನ್ಯ ಆಯುಕ್ತರು ಉಪನಿರ್ದೇಶಕರು ತಿಳಿಸಿದರು.

**ಶಿಕ್ಷಕರ ವಸತಿ ಗೃಹ ಪ್ರಗತಿ ಪರಿಶೀಲನೆ–ಎರಡನೇ ಹಂತ–2008–09:–**

ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು, ಚಿಕ್ಕಮುದವಾಡಿ ಪೂರ್ಣವಾಗಿ ಹಸ್ತಾಂತರವಾಗಿರುತ್ತದೆ. ಶಿಕ್ಷಕರಿಗೆ ನೀಡಿರುವುದಾಗಿ ಉಪನಿರ್ದೇಶಕರು ತಿಳಿಸಿದರು. ಮಾಗಡಿ ತಾಲ್ಲೂಕು, ತಿಪ್ಪಸಂದ್ರ ಹಸ್ತಾಂತರವಾಗಿದ್ದು, ಶಿಕ್ಷಕರಿಗೆ ನೀಡಿರವುದಾಗಿ ಉಪನಿರ್ದೇಶಕರು ತಿಳಿಸಿದರು.

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು, ಪಾತಪಾಳ್ಯ, ಶಿಕ್ಷಕರ ವಸತಿ ಗೃಹ ಪೂರ್ಣಗೊಂಡು ಹಸ್ತಾಂತರವಾಗಿದೆ. ಶಿಕ್ಷಕರು ವಾಸವಾಗಿದ್ದಾರೆ.

ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು, ಕೆಬಿಎಂಎಸ್ ಶಿಕ್ಷಕರ ವಸತಿ ಗೃಹ ಪೂರ್ಣಗೊಂಡಿದ್ದು, ಹಸ್ತಾಂತರವಾಗಿದೆ. ಶಿಕ್ಷಕರಿಗೆ ನೀಡಲಾಗಿದೆ. ಗುಬ್ಬಿ ತಾಲ್ಲೂಕು ಸಿಎಸ್‌ಪುರ ಮತ್ತು ಕಡಬ ಪೂರ್ಣಗೊಂಡು ಹಸ್ತಾಂತರವಾಗಿದ್ದು, ಶಿಕ್ಷಕರಿಗೆ ನೀಡಿದೆ.

ಮಧುಗಿರಿ ಜಿಲ್ಲೆ ಪ್ರಸ್ತುತ ನಿವೇಶನ ಹಸ್ತಾಂತರವಾಗಿದ್ದು, ಕಾಮಗಾರಿ ಪ್ರಾರಂಭವಾಗಿದೆ. ಹಿಂದಿನ ನಿಗಧಿತ ಘಟಕ ವೆಚ್ಚಕ್ಕೆ ಕಾಮಗಾರಿ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ಶ್ರೀ.ವಾಸುದೇವ್, ತಾಂತ್ರಿಕ ವ್ಯವಸ್ಥಾಪಕರು ಒಪ್ಪಿರುತ್ತಾರೆ.

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ಒಂದನೇ ಮಹಡಿ ನಿರ್ಮಾಣವಾಗುತ್ತಿದ್ದು, ಏಪ್ರಿಲ್ ಅಂತ್ಯಕ್ಕೆ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ಇಂಜಿನಿಯರ್‌ರವರು ಸಭೆಗೆ ತಿಳಿಸಿರುತ್ತಾರೆ.

ದಾವಣಗೆರೆ ಜಿಲ್ಲೆ, ಸಂತೇಬೆನ್ನೂರು ಸಿಂಗರಹಳ್ಳಿ ಮತ್ತು ಹುಲಗಾವಲು ಮೂರು ಶಿಕ್ಷಕರ ವಸತಿ ಗೃಹಗಳು ಪೂರ್ಣವಾಗಿ ಹಸ್ತಾಂತರಿಸಲ್ಪಟ್ಟಿದ್ದು, ಶಿಕ್ಷಕರು ವಾಸವಾಗಿರುತ್ತಾರೆ.

ಚಾಮರಾಜನಗರ, ಸಂತೆಮರಳ್ಳಿ ಕಾಮಗಾರಿ ಸ್ಥಗಿತವಾಗಿರುತ್ತದೆ. ಕೂಡಲೇ ಪ್ರಾರಂಭಿಸಲು ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿಗಳು ಮತ್ತು ಉಪನಿರ್ದೇಶಕರಿಗೆ ತಿಳಿಸಿರುತ್ತಾರೆ.

**ಶಿಕ್ಷಕರ ವಸತಿ ಗೃಹ ಪ್ರಗತಿ ಪರಿಶೀಲನೆ–ಮೂರನೇ ಹಂತ–2009–10:–**

ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ವಡ್ಡಹಳ್ಳಿ ವಸತಿ ಗೃಹ ಪೂರ್ಣಗೊಂಡಿದ್ದು, ಮಾರ್ಚ್ 2011ಕ್ಕೆ ಹಸ್ತಾಂತರಿಸಲಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿದನೂರು ತಾಲ್ಲೂಕು, ನಗರಗೆರೆ ಶಿಕ್ಷಕ ವಸತಿ ಗೃಹ ಪೂರ್ಣಗೊಂಡು ಹಸ್ತಾಂತರಿಸಿದೆ. ಶಿಕ್ಷಕರಿಗೆ ಕೂಡಲೇ ಹಂಚಲು ಮಾನ್ಯ ಆಯುಕ್ತರು ಉಪನಿರ್ದೇಶಕರಿಗೆ ಸೂಚಿಸಿದರು.

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು, ಚಿಕ್ಕನಾಯಕನಹಳ್ಳಿ ವಸತಿ ಗೃಹ ಆರ್‌ಸಿಸಿ ಹಂತದಲ್ಲಿರುತ್ತದೆ. ಒಂದು ತಿಂಗಳೊಳಗಾಗಿ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿರುತ್ತಾರೆ. ತುರುವೇಕೆರೆ ತಾಲ್ಲೂಕು, ದಂಡಿನಶಿವರ ವಸತಿ ಗೃಹ ಲಿಂಟಲ್ ಹಂತದಲ್ಲಿದ್ದು, ಆಗಸ್ಟ್ 2012ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್ ರವರು ತಿಳಿಸಿರುತ್ತಾರೆ.

ಮಧುಗಿರಿ ಜಿಲ್ಲೆ ಪಾವಗಡ ತಾಲ್ಲೂಕು, ವೆಂಕಟಾಪುರ, ಶಿರಾ ತಾಲ್ಲೂಕು, ಕಳ್ಳಂಬೆಳ್ಳ, ಕೊರಟಗೆರೆ ತಾಲ್ಲೂಕು, ಹೊಳವನಹಳ್ಳಿ ಮೂರು ವಸತಿ ಗೃಹಗಳು ಅಂತಿಮ ಹಂತದಲ್ಲಿದ್ದು, ಏಪ್ರಿಲ್ 2012ರೊಳಗೆ ಹಸ್ತಾಂತರಿಸುವುದಾಗಿ ರಾಜೀವ್ ಗಾಂಧಿ ವಸತಿ ನಿಗಮದವರು ತಿಳಿಸಿರುತ್ತಾರೆ.

ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲ್ಲೂಕು, ಕಸಬಾ ಹೋಬಳಿ, ಹೊಳಲ್ಕೆರೆ ತಾಲ್ಲೂಕು, ಟಿ.ಎಮ್ಮಿಗನೂರು, ಹಿರಿಯೂರು ಮೂರು ವಸತಿ ಗೃಹಗಳು ಪ್ಲಿಂತ್ ಹಂತದಲ್ಲಿದ್ದು, ಜೂನ್ 2012ರೊಳಗಾಗಿ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

ದಾವಣಗೆರೆ ಜಿಲ್ಲೆ ಜಗಳೂರು ತಾಲ್ಲೂಕು, ಬಿದರಕೆರೆ ಮತ್ತು ಹೊನ್ನಾಳಿ ತಾಲ್ಲೂಕು, ಕುಂದೂರು ಎರಡು ವಸತಿ ಗೃಹಗಳು ಕ್ರಮವಾಗಿ ಲಿಂಟಲ್ ಮತ್ತು ಮೇಲ್ಛಾವಣಿ ಹಂತದಲ್ಲಿದ್ದು, ಜೂನ್ 2012ರೊಳಗೆ ಪೂರ್ಣಗೊಳಿಸಿ ಹಸ್ತಾಂತರಿಸುವುದಾಗಿ ಇಂಜಿನಿಯರ್‌ರವರು ತಿಳಿಸಿದರು.

ಶಿವಮೊಗ್ಗ ಜಿಲ್ಲೆ ಸೊರಬ ಇಲ್ಲಿ ನಿವೇಶನ ಸಮಸ್ಯೆ ಇದ್ದು, ಪರಿಶೀಲಿಸಿ ಹೋಬಳಿ ಮುಖ್ಯ ಕೇಂದ್ರದಲ್ಲಿ ಕೂಡಲೇ ಸೂಕ್ತ ನಿವೇಶನ ನೀಡಲು ಉಪನಿರ್ದೇಶಕರಿಗೆ ಮಾನ್ಯ ಆಯುಕ್ತರು ತಿಳಿಸಿದರು.

ಮೈಸೂರು ಜಿಲ್ಲೆ ಟಿ.ನರಸೀಪುರ ತಾಲ್ಲೂಕು, ತಲಕಾಡು, ನಂಜನಗೂಡು ತಾಲ್ಲೂಕು, ಹುರ ಮತ್ತು ಹುಣಸೂರು ತಾಲ್ಲೂಕು, ಹಾನಗೋಡು ಈ ಮೂರು ವಸತಿ ಗೃಹಗಳು ಕ್ರಮವಾಗಿ ಪ್ಲಿಂತ್ ಮತ್ತು ಮೇಲ್ಛಾವಣಿ ಹಂತದಲ್ಲಿದ್ದು, ಜೂನ್ 2012ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ಸಭೆಗೆ ತಿಳಿಸಿದರು.

ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು, ಚಿಕಲವಾಡಿ ಶಿಕ್ಷಕರ ವಸತಿ ಗೃಹ ಲಿಂಟಲ್ ಹಂತದಲ್ಲಿದ್ದು, ಜೂನ್ 2012ರೊಳಗೆ ಪೂರ್ಣಗೊಳಿಸುವುದಾಗಿ ಇಂಜಿನಿಯರ್‌ರವರು ಸಭೆಗೆ ತಿಳಿಸಿದರು.

ಚಿಕ್ಕಮಗಳೂರು ಜಿಲ್ಲೆ ಕಡೂರು ಶಿಕ್ಷಕರ ವಸತಿ ಗೃಹ ಪೂರ್ಣಗೊಂಡಿದ್ದು, ಇಲಾಖೆಗೆ ಹಸ್ತಾಂತರಿಸುವುದಾಗಿ ರಾಜೀವ್ ಗಾಂಧಿ ವಸತಿ ನಿಗಮದವರು ಸಭೆಯಲ್ಲಿ ತಿಳಿಸಿದರು.

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕು, ಮಾದಾಪುರ ವಸತಿ ಗೃಹ ಪೂರ್ಣಗೊಂಡಿದೆ. ನಾಗಮಂಗಲ ತಾಲ್ಲೂಕು, ಬಿಂಡಿಗನವಿಲೆ ಮತ್ತು ಮಳವಳ್ಳಿ ತಾಲ್ಲೂಕು, ಬಿ.ಜಿ.ಪುರ ವಸತಿ ಗೃಹಗಳು ಮುಕ್ತಾಯ ಹಂತದಲ್ಲಿದ್ದು, ಏಪ್ರಿಲ್ 2012ರ ಅಂತ್ಯದೊಳಗೆ ಇಲಾಖೆಗೆ ಹಸ್ತಾಂತರಿಸುವುದಾಗಿ ರಾಜೀವ್ ಗಾಂಧಿ ವಸತಿ ನಿಗಮದ ತಾಂತ್ರಿಕ ವ್ಯವಸ್ಥಾಪಕರು ಸಭೆಗೆ ತಿಳಿಸಿದರು.

**ಶಿಕ್ಷಕರ ವಸತಿ ಗೃಹ ಪ್ರಗತಿ ಪರಿಶೀಲನೆ–4ನೇ ಹಂತ–2010–11:–**

ಬೆಂಗಳೂರು ಗ್ರಾಮಾಂತರ ಹೊಸಕೋಟೆ ತಾಲ್ಲೂಕು, ದೇವಲಾಪುರ ವಸತಿ ಗೃಹ ಪ್ಲಿಂತ್ ಹಂತದಲ್ಲಿದ್ದು, ಬೆಂಗಳೂರು ದಕ್ಷಿಣ ಜಿಲ್ಲೆ ಆನೇಕಲ್ ತಾಲ್ಲೂಕು, ಸರ್ಜಾಪುರ, ಅತ್ತಿಬೆಲೆ ವಸತಿ ಗೃಹಗಳು ಪ್ಲಿಂತ್ ಹಂತದಲ್ಲಿದ್ದು, ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲ್ಲೂಕು, ಹಾರೋಕೊಪ್ಪ ವಸತಿ ಗೃಹ ಲಿಂಟಲ್ ಹಂತದಲ್ಲಿದ್ದು, ಕೋಲಾರ ಜಿಲ್ಲೆ ಬಂಗಾರಪೇಟೆ ತಾಲ್ಲೂಕು, ಬೇತಮಂಗಲ ವಸತಿ ಗೃಹ, ಮಾಲೂರು ತಾಲ್ಲೂಕು, ಡಿ.ಎನ್.ದೊಡ್ಡಿ ವಸತಿ ಗೃಹ ಪಾಯ ಹಂತದಲ್ಲಿದ್ದು, ಶ್ರೀನಿವಾಸಪುರ ತಾಲ್ಲೂಕು, ರಾಯಲಪಾಡು ಮತ್ತು ಪುಲ್ಲಗೂರು ಕೋಟ ವಸತಿ ಗೃಹಗಳು ಪ್ಲಿಂತ್ ಹಂತದಲ್ಲಿರುವುದಾಗಿ ಇಂಜಿನಿಯರ್ ರವರು ತಿಳಿಸಿದರು.

ಚಿಕ್ಕಬಳ್ಳಾಪುರ ಜಿಲ್ಲೆ ಚಿಂತಾಮಣಿ ತಾಲ್ಲೂಕು, ಬಟ್ಲಹಳ್ಳಿ, ದೊಡ್ಡಬೊಮ್ಮನಹಳ್ಳಿ ಮತ್ತು ಶಿಡ್ಲಘಟ್ಟ ತಾಲ್ಲೂಕು, ತಿಮ್ಮಸಂದ್ರ ವಸತಿ ಗೃಹಗಳು ಕ್ರಮವಾಗಿ ಪಾಯ ಮತ್ತು ಪ್ಲಿಂತ್ ಹಂತದಲ್ಲಿರುವುದಾಗಿ ಇಂಜಿನಿಯರ್ ರವರು ತಿಳಿಸಿದರು.

ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕು ಮಲ್ಲೇನಹಳ್ಳಿ ವಸತಿ ಗೃಹ ನಿವೇಶನ ಸಮಸ್ಯೆಯಿಂದ ಇನ್ನೂ ಪಾರಂಭವಾಗಿಲ್ಲ. ಕೂಡಲೇ ನಿವೇಶನ ಒದಗಿಸುವಂತೆ ಉಪನಿರ್ದೇಶಕರಿಗೆ ಮಾನ್ಯ ಆಯುಕ್ತರು ಸೂಚಿಸಿದರು.

ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲ್ಲೂಕು, ಸಾಲಿಗ್ರಾಮ ಮತ್ತು ಪಿರಿಯಾಪಟ್ಟಣ ತಾಲ್ಲೂಕು, ರಾವಂದೂರು ವಸತಿ ಗೃಹಗಳ ನಿರ್ಮಾಣಕ್ಕಾಗಿ ಪ್ರಸ್ತುತವಾಗಿ ಜಾಗವನ್ನು ಹಸ್ತಾಂತರಿಸಲಾಗಿದೆ.

ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು, ಚಿಕ್ಕಂತನಹಳ್ಳಿ ಮತ್ತು ಪಾಂಡವಪುರ ತಾಲ್ಲೂಕು, ಮೂಡಲಕೊಪ್ಪಲು ಮತ್ತು ಶ್ರೀರಂಗಪಟ್ಟಣ ತಾಲ್ಲೂಕು, ಪಿ.ಟಿ.ಬೆಳಗೊಳ ಮೂರು ವಸತಿಗಳು ಪ್ಲಿಂತ್ ಹಂತದಲ್ಲಿರುತ್ತದೆ.

ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು, ಬುಕ್ಕಾಂಬುದಿ ವಸತಿ ಗೃಹ ಪಾಯ ಹಂತದಲ್ಲಿರುತ್ತದೆ.

ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು, ಹೆಚ್.ಕೊಂಗಳಲೆ, ಅರಸೀಕೆರೆ ತಾಲ್ಲೂಕು, ಕುಡುಕುಂದಿ, ಬೇಲೂರು ತಾಲ್ಲೂಕು, ಬಿಕ್ಕೋಡು, ಚನ್ನರಾಯಪಟ್ಟಣ ತಾಲ್ಲೂಕು, ದಿಡಗ ಮತ್ತು ಹೊಳೇನರಸೀಪುರ ತಾಲ್ಲೂಕು ಜೋಡಿಗುಬ್ಬಿ ವಸತಿ ನಿಲಯಗಳು ಪಾಯ ಹಂತದಲ್ಲಿವೆ.

**ಶಿಕ್ಷಕರ ವಸತಿ ಗೃಹ ಪ್ರಗತಿ ಪರಿಶೀಲನೆ–5ನೇ ಹಂತ–2011–12:–**

ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ವಸತಿ ಗೃಹಕ್ಕೆ ನಿವೇಶನ ಹಸ್ತಾಂತರವಾಗಿದೆ. ಕಾಮಗಾರಿ ಪ್ರಾರಂಭಿಸಬೇಕಾಗಿದೆ.

ರಾಮನಗರ ಜಿಲ್ಲೆ ಮಾಗಡಿ ಮತ್ತು ಕನಕಪುರ ವಸತಿ ಗೃಹಗಳ ನಿವೇಶನ ಹಸ್ತಾಂತರವಾಗಿದೆ.

ತುಮಕೂರು ಜಿಲ್ಲೆ ಗುಬ್ಬಿ ಮತ್ತು ಕುಣಿಗಲ್ ತಾಲ್ಲೂಕಿನ ನಿವೇಶನಗಳು ಹಸ್ತಾಂತರವಾಗಿದ್ದು, ಕಾಮಗಾರಿ ಪ್ರಾರಂಭಿಸಬೇಕಾಗಿದೆ.

ಮಧುಗಿರಿ ತಾಲ್ಲೂಕು 2 ಶಿಕ್ಷಕರ ವಸತಿ ಗೃಹಗಳ ನಿವೇಶನಗಳಲ್ಲಿ ಒಂದು ಹಸ್ತಾಂತರವಾಗಿದ್ದು, ಮತ್ತೊಂದು ಹಸ್ತಾಂತರವಾಗಬೇಕಾಗಿದೆ. ಕೂಡಲೇ ಈ ಬಗ್ಗೆ ಕ್ರಮ ವಹಿಸಲು ಮಾನ್ಯ ಆಯುಕ್ತರು ಉಪನಿರ್ದೇಶಕರಿಗೆ ತಿಳಿಸಿದರು.

ಚಿತ್ರದುರ್ಗ ಜಿಲ್ಲೆ ಹೊಸದುರ್ಗ ನಿವೇಶನ ಹಸ್ತಾಂತರವಾಗಿದೆ.

ದಾವಣಗೆರೆ ಜಿಲ್ಲೆ ಚನ್ನಗಿರಿ ಮತ್ತು ಹರಪನಹಳ್ಳಿ ತಾಲ್ಲೂಕಿನ ನಿವೇಶನಗಳು ಹಸ್ತಾಂತರವಾಗಿದೆ.

ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ವಸತಿ ಗೃಹದ ನಿವೇಶನ ಹಸ್ತಾಂತರವಾಗಿದೆ.

ಚಾಮರಾಜನಗರ ಜಿಲ್ಲೆ ಚಾಮರಾಜನಗರ ವಸತಿ ಗೃಹ ನಿವೇಶನ ಹಸ್ತಾಂತರಿಸಿದೆ.

***ಎಸ್.ಎಸ್.ಎ. ಕಟ್ಟಡ ಕಾಮಗಾರಿಗಳು :***

2008–09ನೇ ಸಾಲಿನಲ್ಲಿ ಬೆಂಗಳೂರು ಉತ್ತರ ಜಿಲ್ಲೆಗೆ ಬಿಡುಗಡೆಯಾಗಿದ್ದ ಕೊಠಡಿಗಳ ಕಾಮಗಾರಿಗಳಲ್ಲಿ ಬಾಕಿ ಇದ್ದು ಅನುದಾನವನ್ನು ವಾಪಸ್ಸು ಮಾಡಲು ತಿಳಿಸಿದರು. ಎಲ್ಲಾ ಜಿಲ್ಲೆಗಳಲ್ಲಿ ಮಂಜೂರಾಗಿರುವ ಕಾಮಗಾರಿಗಳಲ್ಲಿ ಪ್ರಸ್ತುತ ಪ್ರಾರಂಭಿಸಲು ಸಾಧ್ಯವಿಲ್ಲದಿರುವ ಕಾಮಗಾರಿಗಳನ್ನು ಜಾರಿಗೊಳಿಸದಿರಲು ತಿಳಿಸಿದರು.

ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಕಾಮಗಾರಿಗಳನ್ನು ಶಾಲಾ ಎಸ್.ಡಿ.ಎಂ.ಸಿ. ವತಿಯಿಂದಲೇ ನಿರ್ವಹಿಸಲು ಅನುಮತಿ ನೀಡಿದರು.

ಹಾಲಿ ಮಂಜೂರಾಗಿದ್ದು ಪ್ರಾರಂಭಿಸಿರುವ ಕಾಮಗಾರಿಗಳನ್ನು ಆದ್ಯ ಗಮನ ಹರಿಸಿ ಮಾರ್ಚ್2012ರ ಅಂತ್ಯದೊಳಗೆ ಪೂರ್ಣಗೊಳಿಸಲು ಸೂಚಿಸಿದರು. ಬಿ.ಆರ್.ಸಿ. ಕೇಂದ್ರಗಳಿಗೆ ಮಂಜೂರಾಗಿರುವ ತರಭೇತಿ ಕೊಠಡಿಗಳ ಪ್ರಗತಿ ಬಗ್ಗೆ ಪ್ರಸ್ತಾಪಿಸುತ್ತಾ ಡಯಟ್ ವತಿಯಿಂದ ಈಗಾಗಲೇ ಕೊಠಡಿಗಳು ಪೂರ್ಣಗೊಂಡಿದ್ದರೂ ಸಹಾ ಎಸ್.ಎಸ್.ಎ. ವತಿಯಿಂದ ಬಿಡುಗಡೆಯಾಗಿರುವ ಅನುದಾನದಿಂದ ಸ್ಥಳಾವಕಾಶ ಲಭ್ಯವಿದ್ದಲ್ಲಿ ಕೊಠಡಿ ಕಟ್ಟಬಹುದೆಂದು ತೀರ್ಮಾನಿಸಿ ಆದೇಶಿದರು. ಕೊಠಡಿಯನ್ನು ಸೂಚಿಸಿರುವ ಅಳತೆಯಂತೆ ಪಕ್ಕಾ ಕಟ್ಟಡವನ್ನು ನಿರ್ಮಿಸಲು ಸೂಚಿಸಿದರು. ಸಂಬಂದಪಟ್ಟ ಜಾಗದ ಬಗ್ಗೆ ಪರಿಶೀಲಿಸಿ ಕ್ರಮ ಕೈಗೊಳ್ಳಲು ಉಪ ನಿರ್ದೇಶಕರುಗಳಿಗೆ ಸ್ವಾಯತ್ತತೆ ನೀಡಲಾಗಿದೆಯೆಂದು ಸೂಚಿಸಿದರು.

ಜಿಲ್ಲಾ ಅನುಷ್ಠಾನ ಸಮಿತಿ ಸಭೆಯನ್ನು ನಡೆಸದಿರುವ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಿ ಈ ಬಗ್ಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ಸಂಪರ್ಕಿಸಿ ಶೀಘ್ರವಾಗಿ ನಡೆಸಲು ಕ್ರಮ ಕೈಗೊಳ್ಳಲು ಸೂಚಿಸಿದರು.

***ಶಿಕ್ಷಕರ ತರಬೇತಿಗಳು :***

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ ವತಿಯಿಂದ ನಡೆಸಿರುವ ವಿವಿಧ ತರಬೇತಿ ಕಾರ್ಯಕ್ರಮಗಳ ಪ್ರಗತಿ ಬಗ್ಗೆ ಪರಿಶೀಲಿಸುತ್ತಾ, ಕಡಿಮೆ ಪ್ರಗತಿ ಸಾಧಿಸಿದ ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ ಮತ್ತು ಚಾಮರಾಜನಗರ ಜಿಲ್ಲೆಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

***ಕೆ.ಜಿ.ಬಿ.ವಿ. ಶಾಲೆಗಳ ಕಾಮಗಾರಿಗಳು :***

ಕೆ.ಜಿ.ಬಿ.ವಿ. ಶಾಲೆಗಳಿಗೆ ಮಂಜೂರಾಗಿರುವ ಕಾಮಗಾರಿಗಳ ಬಗ್ಗೆ ಪರಿಶೀಲಿಸಿ ಕಾಮಗಾರಿಗಳನ್ನು ತುರ್ತಾಗಿ ಪೂರ್ಣಗೊಳಿಸುವತ್ತ ಕ್ರಮವಹಿಸಲು ಸೂಚಿಸಿದರು.

***ಪ್ರೌಢ ಶಿಕ್ಷಣ ವಿಭಾಗ :***

ನಿರ್ದೇಶಕರು ( ಪ್ರೌಢ ಶಿಕ್ಷಣ ) ರವರು ದಿನಾಂಕ: 01-06-1987 ರಿಂದ 1994-95 ವರೆಗೆ ಅನುದಾನ ರಹಿತವಾಗಿ ಪ್ರಾರಂಭಿಸಿರುವ ಖಾಸಗಿ ಪ್ರೌಢಶಾಲೆಗಳನ್ನು ಸರ್ಕಾರದ ಅನುದಾನಕ್ಕೆ ಒಳಪಡಿಸುವ ಕುರಿತು ನಿಯಮಾನುಸಾರ ಅರ್ಹತೆಯಿರುವ ಶಾಲೆಗಳ ಮಾಹಿತಿಗಳನ್ನು ಪರಿಶೀಲಿಸಲಾಗುತ್ತಿದ್ದು ಪ್ರಸ್ತಾವನೆಗಳನ್ನು ಸಲ್ಲಿಸುವಾಗ ವಿವರವಾಗಿ ಪರಿಶೀಲಿಸಲು ತಿಳಿಸಿದರು. ಅರ್ಹತೆಯಿದ್ದು, ಇಲಾಖೆಗೆ ಪ್ರಸ್ತಾವನೆಗಳನ್ನು ಸಲ್ಲಿಸದಿರುವ ಶಾಲೆಗಳಿಗೆ ಭೇಟಿ ನೀಡಿ ಪರಿಶೀಲಿಸಿ, ಆ ಶಾಲೆಗಳನ್ನು ಮುಚ್ಚಲಾಗಿದ್ದರೆ, ಅಂತಹ ಶಾಲೆಗಳ ಮಾನ್ಯತೆ ಮತ್ತು ನೋಂದಣಿಯನ್ನು ರದ್ದುಪಡಿಸಲು ಕ್ರಮವಹಿಸಲು ಸೂಚಿಸಿದರು.

ದಿ 23-11-2011 ರಂದಿನ ಸರ್ಕಾರಿ ಆದೇಶದಂತೆ ಖಾಸಗಿ ಪ್ರೌಢಶಾಲೆಗಳಲ್ಲಿನ ಬೋಧಕೇತರ ನೌಕರರನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ ಜಿಲ್ಲಾ ಪಂಚಾಯತ್ ತ್ರಿಸದಸ್ಯ ಸಮಿತಿ ಅನುಮೋದನೆ ಪಡೆದು ವೇತನಾನುದಾನಕ್ಕೆ ಒಳಪಡಿಸುವ ಬಗ್ಗೆ ಕ್ರಮ ಕೈಗೊಳ್ಳಲು ತಿಳಿಸಿದರು.

ಕರ್ನಾಟಕ ನಾಗರೀಕ ಸೇವಾ ಖಾತರಿ ಅಧಿನಿಯಮ-2011 ಜಾರಿಯಾಗಿದ್ದು, ಸುತ್ತೋಲೆ ಮತ್ತು ವೇಳಾಪಟ್ಟಿಯನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ನೀಡಲಾಗಿದೆ. ಸದರಿ ಸುತ್ತೋಲೆಯಲ್ಲಿ ನೀಡಲಾಗಿರುವ ನಿರ್ದೇಶನಗಳನ್ನು ಪಾಲಿಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲು ತಿಳಿಸಿದರು.

ಸರ್ಕಾರಿ ಪ್ರೌಢಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರ ಹುದ್ದೆಗಳ ಕೌನ್ಸಿಲಿಂಗ್ ಕಾರ್ಯವನ್ನು ಸುತ್ತೋಲೆಯ ಅಂಶಗಳನ್ವಯ ನಿಗಧಿತ ವೇಳಾ ಪಟ್ಟಿಯಂತೆ ಕೈಗೊಳ್ಳಲು ತಿಳಿಸಿದರು.

ಸರ್ಕಾರಿ ಪ್ರೌಢಶಾಲಾ ಸಹ ಶಿಕ್ಷಕರ ಹುದ್ದೆಗಳಿಗೆ ಬಡ್ತಿ ನೀಡುವಾಗ ಜೇಷ್ಠತೆಯಂತೆ ಕ್ರಮ ಕೈಗೊಂಡು, ನೇರ ನೇಮಕಾತಿ : ಬಡ್ತಿ ಮೀಸಲಾತಿಗಳನ್ನು ತಪ್ಪದೆ ಪಾಲಿಸಲು ತಿಳಿಸಿದರು.

ಎಸ್.ಎಸ್.ಎಲ್.ಸಿ. ಫಲಿತಾಂಶ ಉತ್ತಮಿಕೆ ಮತ್ತು ಶಾಲೆ ತೊರೆಯುವುದರ *ಇಳಿಕೆ ಕುರಿತು ಆಗಿರುವ ಪ್ರಗತಿಯನ್ನು ಪ್ರದರ್ಶಿಸಲಾಯಿತು. ಶೂನ್ಯ ಪ್ರಗತಿ ಜಿಲ್ಲೆಗಳವರು ಕ್ರಮ ಮಾಡಲು ಸೂಚಿಸಲಾಯಿತು.*

***ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ:***

**(ಅ) ಸೆಮಿಸ್ ಮಾಹಿತಿ ಸಲ್ಲಿಸುವ ಕುರಿತು:**

ನಿರ್ದೇಶಕರು(ಆರ್.ಎಂ.ಎಸ್.ಎ) ರವರು ಆರ್‌ಎಂಎಸ್‌ಎ ಕಾರ್ಯಕ್ರಮಗಳ ಪ್ರಗತಿ ಪರಿಶೀಲಿಸುತ್ತಾ, ಸೆಮಿಸ್ ಕುರಿತು 2011-12ನೇ ಸಾಲಿನ ಸೆಮಿಸ್ ಮಾಹಿತಿ ಸಂಗ್ರಹಿಸುವ ಮುನ್ನ ಮಾಸ್ಟರ್ ಸ್ಕೂಲ್ ಲಿಸ್ಟ್

ಪಟ್ಟಿಯನ್ನು ದೃಢೀಕರಣದೊಂದಿಗೆ ಆರ್.ಎಂ.ಎಸ್.ಎ. ಕಛೇರಿಗೆ ಸಲ್ಲಿಸಲು ತಿಳಿಸಿದರು. 2010–11ನೇ ಸಾಲಿನ ಸೆಮಿಸ್ ಮಾಹಿತಿಯ ಎಲ್ಲಾ ಲೋಪದೋಷಗಳನ್ನು ಸರಿಪಡಿಸಿಕೊಂಡು ದಿನಾಂಕ:27–03–2012 ರೊಳಗಾಗಿ ದೃಢೀಕರಿಸಿ ಸಲ್ಲಿಸುವುದು. ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ಆನ್‌ಲೈನ್ ಮಾಹಿತಿ ಸಂಗ್ರಹಣಾ ವ್ಯವಸ್ಥೆ, 2011–12ನೇ ಸಾಲಿನಲ್ಲಿ ಸೆಮಿಸ್ ಮಾಹಿತಿ ಸಂಗ್ರಹಣೆಗಾಗಿ ಶಾಲಾ ಪಟ್ಟಿಯನ್ನು ಅಂತಿಮಗೊಳಿಸುವುದು, ಡೈಸ್ ಮತ್ತು ಸೆಮಿಸ್ ಡೇಟಾಬೇಸ್ ನಿರ್ವಹಣೆಯ ಜವಾಬ್ದಾರಿಯನ್ನು ಎಸ್.ಎಸ್.ಎ., ಎ.ಪಿ.ಸಿ ಮತ್ತು ಎಸ್.ಎಸ್.ಎ. ಕಂಪ್ಯೂಟರ್ ಪ್ರೋಗ್ರಾಮರ್ ನಿರ್ವಹಿಸಲು ತಿಳಿಸಿದರು.

**(ಆ) 2010–11,2011–12 ನೇ ಸಾಲಿನ ಹೆಣ್ಣು ಮಕ್ಕಳ ಪ್ರೋತ್ಸಾಹ ಧನ ಪ್ರಸ್ತಾವನೆಗಳನ್ನು ಸಲ್ಲಿಸುವ ಕುರಿತು**

2010–11 ಮತ್ತು 2011–12 ನೇ ಸಾಲಿನ ಹೆಣ್ಣು ಮಕ್ಕಳ ಪ್ರೋತ್ಸಾಹ ಧನ ಪ್ರಸ್ತಾವನೆಗಳನ್ನು ಎಮ್.ಎಚ್.ಆರ್.ಡಿ. ನೀಡಿರುವ ನಮೂನೆ 1.2.3 ರಲ್ಲಿ ಸೂಚನೆಗಳನ್ನು ಪಾಲಿಸಿ ಮುಖ್ಯ ಶಿಕ್ಷಕರಿಂದ ದೃಡೀಕರಣ ಪಡೆದು ಪ್ರಸ್ತಾವನೆಗಳನ್ನು ( ಹಾರ್ಡ ಪ್ರತಿ ಮತ್ತು ಸಾಫ್ಟ್ ಪ್ರತಿ) ದಿ: 28–03–2012 ರ ಒಳಗೆ ಆರ್.ಎಮ್.ಎಸ್.ಎ. ಕಚೇರಿಗೆ ಮುದ್ದಾಂ ಕಳುಹಿಸಿಕೊಡಬೇಕು (ವಿಶೇಷ ಸೂಚನೆ: ಎಮ್.ಎಚ್.ಆರ್.ಡಿ. ಸೂಚನೆಯಂತೆ Date of Maturity ದಿನಾಂಕಗಳನ್ನು ತ್ರೈಮಾಸಿಕ ತಿಂಗಳ ಅಂತ್ಯಕ್ಕೆ ಅಂದರೆ ಮಾರ್ಚ31 , ಜೂನ್ 30, ಸೆಪ್ಟೆಂಬರ್ 30, ಡಿಸೆಂಬರ್ 31 ದಿನಾಂಕಗಳು ಇರುವಂತೆ ಭರ್ತಿ ಮಾಡಬೇಕು)

(ಇ) **ತರಬೇತಿಗಳ ಪ್ರಗತಿ ವಿವರಗಳನ್ನು ಆನ್ ಲೈನ್ ನಲ್ಲಿ ಸಲ್ಲಿಸುವ ಬಗ್ಗೆ:**

2011–12ನೇ ಸಾಲಿನಲ್ಲಿ ಮುಖ್ಯ ಶಿಕ್ಷಕರ ತರಬೇತಿ ಸಂಪದೀಕರಣ, ವಿಷಯ ಶಿಕ್ಷಕರ ವೇದಿಕೆ 2011–12 ನೇ ಸಾಲಿನ ಆರ್.ಎಮ್.ಎಸ್.ಎ. ತರಬೇತಿಗಳನ್ನು ಸಿ.ಟಿ.ಇ. ಮತ್ತು ಡಯಟ್ ಮೂಲಕ ಅನುಷ್ಠಾನಗೊಳಿಸಲಾಗುತ್ತದೆ ಈ ತರಬೇತಿಗಳ ಪ್ರಗರಿ ವಿವರಗಳನ್ನು ಪಡೆದು ಎಲ್ಲಾ ಸಿ.ಟಿ.ಇ. ಮತ್ತು ಡಯಟ್ ಪ್ರಾಚಾರ್ಯರಿಗೆ ಇ–ಮೇಲ್ ಕಳುಹಿಸಲಾಗಿದೆ. Google Docs Internet Explorer ಮೂಲಕ ಇ ಮೇಲ್ ಕಳುಹಿಸಿದ್ದು. ದಿನಾಂಕ: 28.03.2012 ರೊಳಗೆ ತರಬೇತಿಗಳ ಭೌತಿಕ ಮತ್ತು ಆರ್ಥಿಕ ಪ್ರಗತಿಯನ್ನು ಆನ್ ಲೈನ್ ನಲ್ಲಿ ಭರ್ತಿ ಮಾಡಿ ಸಲ್ಲಿಸಲು ಎಲ್ಲಾ ಸಿ.ಟಿ.ಇ. ಮತ್ತು ಡಯಟ್ ಪ್ರಾಚಾರ್ಯರಿಗೆ ತಿಳಿಸಲಾಗಿದೆ.

***ಆಡಳಿತಾತ್ಮಕ ಅಂಶಗಳು :***

ಶ್ರೀ ವಿ.ಜಿ.ದಿವಾಕರ, ಅಪರ ಆಯುಕ್ತರು (ಆಡಳಿತ) ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತ, ಪ್ರಥಮ ದರ್ಜೆ ಸಹಾಯಕರು ಮತ್ತು ದ್ವಿತೀಯ ದರ್ಜೆ ಸಹಾಯಕರುಗಳ ಹುದ್ದೆಗಳ ಮಾಹಿತಿಯನ್ನು ಪರಿಶೀಲಿಸಿ ಸರಿಯಾದ ಮಾಹಿತಿ ನೀಡಲು ತಿಳಿಸಿದರು. ನ್ಯಾಯಾಲಯಗಳ ಬಾಕಿ ಕಡತಗಳ ಬಗ್ಗೆ ಪರಿಶೀಲಿಸಿ ಅಗತ್ಯ ಮಾಹಿತಿ ಸಲ್ಲಿಸಲು ತಿಳಿಸಿದರು. ಶಿಕ್ಷಣ ಅದಾಲತ್ ಕಾರ್ಯಕ್ರಮದಡಿ ಬಾಕಿ ಉಳಿದಿರುವ ಕಡತಗಳನ್ನು ಕೂಡಲೇ ಪರಿಶೀಲಿಸಿ ಇ–ಮೇಲ್ ಮೂಲಕ ಮಾಹಿತಿ ಸಲ್ಲಿಸಲು ಸೂಚಿಸಿದರು. ಶಿಸ್ತು ಪ್ರಕರಣಗಳು ಬಾಕಿ ಇರುವ ಬಗ್ಗೆ ಪರಿಶೀಲಿಸಿ ಶೀಘ್ರವಾಗಿ ಅಗತ್ಯ ಕ್ರಮ ಕೈಗೊಂಡು ಇತ್ಯರ್ಥಪಡಿಸಲು ತಿಳಿಸಿದರು. ವರ್ಗಾವಣೆಗಳ ಬಗ್ಗೆ ಖಾಲಿ ಹುದ್ದೆಗಳ ಮಾಹಿತಿಯನ್ನು ಆನ್ ಲೈನ್ ಮೂಲಕ ತುರ್ತಾಗಿ ಗಣಕೀಕರಿಸಲು ಸೂಚಿಸಿದರು. ವರ್ಗಾವಣೆಗಳ ಕೌನ್ಸಿಲಿಂಗ್ ದಿನಾಂಕಗಳನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಿದ್ದು,

ಈ ಬಗ್ಗೆ ತಮ್ಮ ಜಿಲ್ಲೆಗಳ ಜಿಲ್ಲಾ ಪಂಚಾಯತ್ ಕಛೇರಿಗಳಲ್ಲಿ KESWAN ಸೌಲಭ್ಯ ಇರುವ ಬಗ್ಗೆ ವ್ಯವಸ್ಥೆ ಮಾಡಿಕೊಂಡು ಕೌನ್ಸಿಲಿಂಗ್ ನಿರ್ವಹಿಸಲು ಸೂಚಿಸಿದರು.

***ಪ್ರಾಥಮಿಕ ಶಾಲಾ ವಿಭಾಗ:***

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ರವರು ಮಾತನಾಡಿ, ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ಹೆಚ್ಚುವರಿ ಶಿಕ್ಷಕರ ಮರುಹಂಚಿಕೆ ಕಾರ್ಯವನ್ನು ರಾಜ್ಯ ಕಛೇರಿಯಿಂದ ನೀಡಿರುವ ನಿರ್ದೇಶನ ಮತ್ತು ವೇಳಾಪಟ್ಟಿಯಂತೆ ನಿರ್ವಹಿಸಲು ತಿಳಿಸಿದರು. ಖಾಸಗಿ ಅನುದಾನಿತ ಶಾಲೆಗಳ ಮಾನ್ಯತೆ ನವೀಕರಣ ಆಗದಿರುವ ಶಾಲೆಗಳ ಬಗ್ಗೆ ಪರಿಶೀಲಿಸಿ ಕ್ರಮವಹಿಸಲು ಎಲ್ಲಾ ಉಪ ನಿರ್ದೇಶಕರುಗಳಿಗೆ ತಿಳಿಸಿದರು. ಇಲಾಖೆಯ ಮಾನ್ಯತೆ ಇಲ್ಲದೆ ಶಾಲೆ ನಡೆಯಬಾರದು, ಈ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಕ್ರಮವಹಿಸಬೇಕೆಂದು ತಿಳಿಸಿದರು. ಸರ್ಕಾರಿ ಆದೇಶದಂತೆ ಎಲ್ಲಾ ಅನುದಾನರಹಿತ ಖಾಸಗಿ ಪ್ರಾಥಮಿಕ ಶಾಲೆಗಳಲ್ಲಿ ಸೇವಾ ಭದ್ರತೆ ನಿಯಮಗಳು ಜಾರಿಗೊಳಿಸಲು ಈಗಾಗಲೇ ನೀಡಿರುವ ನಿರ್ದೇಶನದಂತೆ ಡ್ರೈವ್ ಮೂಲಕ ಅನುಷ್ಠಾನಗೊಳಿಸಲು ಸೂಚನೆಗಳು ನೀಡಿದರು. ನ್ಯಾಯಾಲಯ ಪ್ರಕರಣಗಳು ಇದ್ದಲ್ಲಿ ಅದರ ಬಗ್ಗೆ ಕ್ರಮ ಕೈಗೊಂಡು ವರದಿ ಮಾಡಿ ಸಮಸ್ಯೆ ಪರಿಹರಿಸಿಕೊಳ್ಳಬೇಕು. ಪ್ರತಿಯೊಂದು ಶಾಲೆಗಳಲ್ಲಿ ಕೂಡಲೇ ಅಗ್ನಿ ನಂದಕ ಅಳವಡಿಸಲು ಸೂಚಿಸಿ ಪೂರ್ಣವಾದ ವಿವರವನ್ನು ಸಲ್ಲಿಸಲು ಸೂಚಿಸಿದರು.

***ಎಸ್ಎಸ್ಎಲ್‌ಸಿ ಪರೀಕ್ಷಾ ಸಿದ್ಧತೆ ಮತ್ತು ಫಲಿತಾಂಶ ಸುಧಾರಣೆ ಬಗ್ಗೆ:***

ಏಪ್ರಿಲ್–2012 ರಲ್ಲಿ ನಡೆಯಲಿರುವ ಎಸ್ಎಸ್ಎಲ್‌ಸಿ ಪರೀಕ್ಷೆಗೆ ನಿಯಮಾನುಸಾರ ಎಲ್ಲಾ ರೀತಿಯ ಪೂರ್ವಸಿದ್ಧತೆಯನ್ನು ಮಾಡಿಕೊಳ್ಳಲು ಮತ್ತು ಆಯಾ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಹಕಾರದೊಂದಿಗೆ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲು ಮಾನ್ಯ ಆಯುಕ್ತರು ಎಲ್ಲಾ ಉಪನಿರ್ದೇಶಕರುಗಳಿಗೆ ಸೂಚಿಸಿದರು.

ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ನಿರ್ದೇಶಕರು[ಪ್ರೌಢಶಿಕ್ಷಣ] 24-03-12

ನಿರ್ದೇಶಕರು
[ಎಸ್.ಎಸ್.ಎ/ಆರ್‌ಎಂಎಸ್ಎ]

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.